ಸ್ಥಾಪನೆ -2010

# ಹೊಸ ನಾವಿಕ

RNI - KARKAN/2010/32092
Post. Reg No. KA/SK/SMG-1210/2025-27
e-mail: hosanavika@gmail.com
Website: www.hosanavika.com
WhatsApp: 948 248 2182

HOSA NAVIKA KANNADA DAILY EVENING NEWS PAPER

● ಸಂಪುಟ: 17 ● ಸಂಚಿಕೆ : 228 ● ಪುಟಗಳು: 04 ● ಬಿಡಿ ಪ್ರತಿ: ರೂ. 1.50 ● ಮಾಸಿಕ ಚಂದಾ :ರೂ.50 facebook: HOSANAVIKA ದಿನಾಂಕ: 11-09-2026 ಶುಕ್ರವಾರ

ಕಾರ್ಯನಿರ್ವಾಹಕ ಸಂಪಾದಕ : ಡಾ. ಎಂ.ಪಿ.ಎಂ. ಷಣ್ಮುಖಯ್ಯ BA., B.Ed., ಸಂಸ್ಥಾಪಕ ಸಂಪಾದಕ: ಅಲ್ಫೋನ್ಸ್ ರಾಕೇಶ್ ಡಿಸೋಜ MA MCJ., MLISc., PGDMM., ಸುದ್ದಿಸಂಪಾದಕ : ಎಂ.ಪಿ.ಎಂ. ಚನ್ನಬಸಯ್ಯ BA., B.Ed.,

## ವೀರ ಸಾವರ್ಕರ್ ಹಿಂದೂ ಸಂಘಟನಾ ಮಹಾಮಂಡಳಿಯಿಂದ ಸೆ.14ರಿಂದ 82ನೇ ಗಣೇಶೋತ್ಸವ | ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ




(ಹೊಸನಾವಿಕ)

ಶಿವಮೊಗ್ಗ, ಸೆ.11: ವೀರ ಸಾವರ್ಕರ್ ಹಿಂದೂ ಸಂಘಟನಾ ಮಹಾಮಂಡಳಿ (ಹಿಂದೂ ಮಹಾ ಸಭಾ ಅಂಗಸಂಸ್ಥೆ) ವತಿಯಿಂದ 82ನೇ ವರ್ಷದ ಗಣೇಶೋತ್ಸವ ವನ್ನು ಸೆ.14ರಿಂದ 25ರವರೆಗೆ ವಿವಿಧ ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ ಗಳೊಂದಿಗೆ ಆಚರಿಸಲಾಗುವುದು ಎಂದು ರಾಜ್ಯ ಬ್ರಾಹ್ಮಣ ಮಹಾ ಮಂಡಳಿ ನಿರ್ದೇಶಕ ವಿ.ಎಂ. ಮಾಲತೇಶ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 1945 ರಿಂದ ಸಂಘಟನೆಯ ವತಿಯಿಂದ ಗಣೇಶೋತ್ಸವ ಆಚರಿಸಿಕೊಂಡು ಬರಲಾಗುತ್ತಿದ್ದು, ಈ ಬಾರಿ ಹಿಂದೂ ಧರ್ಮಾಭಿಮಾನಿಗಳ ಸಹಕಾರ ದೊಂದಿಗೆ ವಿವಿಧ ಕಾರ್ಯಕ್ರಮ ಗಳನ್ನು ಹಮ್ಮಿಕೊಳ್ಳಲಾಗಿದೆ ಎಂದರು.

ಸೆ.14ರಂದು ಬೆಳಿಗ್ಗೆ 11.30ಕ್ಕೆ ಕೋಟೆ ಶ್ರೀ ಭೀಮೇಶ್ವರ ದೇವಸ್ಥಾನ ದಲ್ಲಿ ಶ್ರೀ ವರಸಿದ್ಧಿ ವಿನಾಯಕ ಸ್ವಾಮಿಯ ಪ್ರತಿಷ್ಠಾಪನೆ ನಡೆಯ ಲಿದ್ದು, ಅಂದಿನಿಂದ ಪ್ರತಿದಿನ ಸಂಜೆ 7ಕ್ಕೆ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಲಿವೆ.

ಸೆ.15ರಂದು ಸ್ನೇಹ ಸಮ್ಮಿಲನ ಕಲಾತಂಡದಿಂದ ಸುಗಮ ಸಂಗೀತ, ಸೆ.16ರಂದು ಶ್ರೀ ಮಹಾಗಣಪತಿ ಯಕ್ಷಗಾನ ಬಳಗದಿಂದ ಪೌರಾಣಿಕ ಯಕ್ಷಗಾನ, ಸೆ.17ರಂದು ರಾಜಶೇಖರ್ ಮತ್ತು ಸಂಗಡಿಗ ರಿಂದ ರಸಮಂಜರಿ, ಸೆ.18ರಂದು ಯಕ್ಷಾನುಗ್ರಹ ಸಂಸ್ಕೃತಿ ಸಂವರ್ಧನಾ ಸಭಾದಿಂದ ಇಂದ್ರಜಿತು ಕಾಳಗ ಯಕ್ಷಗಾನ, ಸೆ.19ರಂದು ಗುರುರಾಜ ಹೊಸಕೋಟೆ ಮತ್ತು ತಂಡದಿಂದ ಜನಪದ ಸಂಭ್ರಮ ಹಾಗೂ ಸೆ.20ರಂದು ಯಕ್ಷಸಮೂಹ ಯಕ್ಷಕಲಾ ಪ್ರತಿಷ್ಠಾನದಿಂದ ಪೌರಾಣಿಕ ಯಕ್ಷಗಾನ ನಡೆಯಲಿದೆ

ಸೆ.21ರಂದು ಶಾರ್ವರೀಶ ನಾಟ್ಯಕೇಂದ್ರ, ಹಾವೇರಿ ಹಾಗೂ ಶೃತಿ ಜೋಷಿ ಮತ್ತು ತಂಡದಿಂದ ಭರತನಾಟ್ಯ, ಸೆ.22ರಂದು ಪುಷ್ಪ ಲತಾ ಮತ್ತು ಸಂಗಡಿಗರಿಂದ ಸುಗಮ ಸಂಗೀತ, ಸೆ.23ರಂದು ಶ್ರೀ ಸಿದ್ಧಿವಿನಾಯಕ ಯಕ್ಷಗಾನ ನಾಟ್ಯ ಸಂಘದಿಂದ ಭಸ್ಮಾಸುರ ಮೋಹಿನಿ ಯಕ್ಷಗಾನ ಪ್ರದರ್ಶನಗೊಳ್ಳಲಿದೆ. ಸೆ.24ರಂದು ವೀರ ಶಿವಮೂರ್ತಿ ಅವರ ಪುಣ್ಯಸ್ಮರಣೆ, ಮಹಾ ಮಂಗಳಾರತಿ ಹಾಗೂ ಪ್ರಸಾದ ವಿನಿಯೋಗ ನಡೆಯಲಿದೆ. ಸೆ.25 ರಂದು ಬೆಳಿಗ್ಗೆ 9.30ಕ್ಕೆ ಶ್ರೀ ವರಸಿದ್ಧಿ ವಿನಾಯಕ ಸ್ವಾಮಿಯ ರಾಜಬೀದಿ ಉತ್ಸವ ಹಾಗೂ ವಿಸರ್ಜನೆ ನಡೆಯಲಿದೆ ಎಂದು ತಿಳಿಸಿದರು.

ಹಿಂದೂ ಸಂಘಟನಾ ಮಹಾ ಮಂಡಳಿ ಆಶ್ರಯದಲ್ಲಿ ಸಾಹಿತಿ ರಾಮ್ ಕದಮ್ ರಚಿಸಿರುವ ಕೇಸರಿ ಧ್ವಜ ವಿಹಾರಿ ಮಹಾ ಗಣಪತಿ- ಗೀತನಮನ ಮೋದಗಣಪ ಎಂಬ ಎಐ ನೆರವಿನಿಂದ ಸೃಷ್ಟಿಸಲಾದ ಭಕ್ತಿಗೀತೆಯನ್ನು ಪತ್ರಿಕಾ ಭವನದಲ್ಲಿ ಬಿಡುಗಡೆಗೊಳಿಸಲಾಯಿತು.

ಗೀತೆಯು ಮೂಲಕ ಗಣಪತಿಯ ಮಹಿಮೆ, ಭಕ್ತಿಭಾವ ಹಾಗೂ ಹಿಂದೂ ಧಾರ್ಮಿಕ ಪರಂಪರೆಯನ್ನು ಪ್ರತಿಬಿಂಬಿಸುವ ಉದ್ದೇಶ ಹೊಂದಲಾಗಿದೆ. ಸಾಂಪ್ರದಾಯಿಕ ಭಕ್ತಿಗೀತೆಗೆ ಕೃತಕ ಬುದ್ಧಿಮತ್ತೆ ತಂತ್ರಜ್ಞಾನದ ಮೂಲಕ ಸಂಗೀತ ಹಾಗೂ ಗಾಯನ ರೂಪ ನೀಡಿರುವುದು ವಿಶೇಷವಾಗಿದೆ ಎಂದು ರಾಮ್ ಕದಮ್ ಹೇಳಿದರು.

ಹಿಂದೂ ಸಂಘಟನಾ ಮಹಾ ಮಂಡಳಿ ಸಂಚಾಲಕ ದತ್ತಾತ್ರೇಯ, ನಿರ್ದೇಶಕ ಚಂದ್ರಶೇಖರ (ರಾಜು) ಉಪಸ್ಥಿತರಿದ್ದರು.

## ಬ್ಯಾಂಕ್ ಮುಷ್ಕರಕ್ಕೆ ಶಿವಮೊಗ್ಗದಲ್ಲಿ ಭರ್ಜರಿ ಬೆಂಬಲ ನ್ಯಾಯಸಮ್ಮತ ಬೇಡಿಕೆಗಳ ಈಡೇರಿಕೆಗೆ ಆಗ್ರಹ




(ಹೊಸನಾವಿಕ)

ಶಿವಮೊಗ್ಗ, ಸೆ. 11: ಬ್ಯಾಂಕ್ ನೌಕರರು ಮತ್ತು ಅಧಿಕಾರಿಗಳ ನ್ಯಾಯಸಮ್ಮತ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಯುನೈಟೆಡ್ ಫೋರಂ ಆಫ್ ಬ್ಯಾಂಕ್ ಯೂನಿಯನ್ಸ್ (ಯುಎಫ್‌ಬಿಯು) ಕರೆ ನೀಡಿದ್ದ ಅಖಿಲ ಭಾರತ ಬ್ಯಾಂಕ್ ಮುಷ್ಕರಕ್ಕೆ ಶಿವಮೊಗ್ಗದಲ್ಲಿ ವ್ಯಾಪಕ ಬೆಂಬಲ ವ್ಯಕ್ತವಾಯಿತು.

ಮುಷ್ಕರದ ಅಂಗವಾಗಿ ನಗರದ ಬಿ.ಎಚ್. ರಸ್ತೆಯಲ್ಲಿರುವ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ (ಎಸ್‌ಬಿಐ) ಕಚೇರಿ ಎದುರು ಬೃಹತ್ ಪ್ರತಿಭಟನೆ ನಡೆಸಿದ ನೌಕರರು, ಬಳಿಕ ಗೋಪಿ ಸರ್ಕಲ್ ವರೆಗೆ ಪ್ರತಿಭಟನಾ ಮೆರವಣಿಗೆ ನಡೆಸಿದರು. ಶಿವಮೊಗ್ಗ ನಗರ ಹಾಗೂ ಸುತ್ತಮುತ್ತಲಿನ ವಿವಿಧ ಬ್ಯಾಂಕ್‌ಗಳ 500ಕ್ಕೂ ಹೆಚ್ಚು ನೌಕರರು ಮತ್ತು ಅಧಿಕಾರಿಗಳು ಪಾಲ್ಗೊಂಡಿದ್ದರು.

ಬ್ಯಾಂಕ್‌ಗಳ ವ್ಯವಹಾರ ವೃದ್ಧಿ, ಗ್ರಾಹಕ ಸೇವೆ, ಠೇವಣಿ ಸಂಗ್ರಹ, ಸಾಲ ವಿತರಣೆ ಹಾಗೂ ವಸೂಲಾತಿ ಸೇರಿದಂತೆ ಬ್ಯಾಂಕ್‌ಗಳ ಕಾರ್ಯ ಕ್ಷಮತೆ ಮತ್ತು ಲಾಭದಾಯಕತೆ ಯಲ್ಲಿ ಪ್ರತಿಯೊಬ್ಬ ನೌಕರ ಹಾಗೂ ಅಧಿಕಾರಿಯ ಕೊಡುಗೆ ಮಹತ್ವ ದ್ದಾಗಿದೆ. ಹೀಗಾಗಿ ಪರ್ಫಾರ್ಮೆನ್ಸ್ ಲಿಂಕ್ಡ್ ಇನ್ಸೆಂಟಿವ್ (ಪಿಎಲ್‌ಐ) ಹಂಚಿಕೆಯಲ್ಲಿ ತಾರತಮ್ಯ ಮಾಡದೆ, ಸಮಾನ ಕೊಡುಗೆಗೆ ಸಮಾನ ಗೌರವ ನೀಡಬೇಕು ಎಂದು ಪ್ರತಿಭಟನಾಕಾರರು ಆಗ್ರಹಿಸಿದರು.

ಯುಎಫ್‌ಬಿಯು ಶಿವಮೊಗ್ಗ ಸಂಚಾಲಕ ನೆಲ್ಸನ್ ಮಾತನಾಡಿ, ಐದು ದಿನಗಳ ಬ್ಯಾಂಕಿಂಗ್ ವ್ಯವಸ್ಥೆಯನ್ನು ಶೀಘ್ರ ಜಾರಿಗೆ ತರಬೇಕು, ಖಾಲಿ ಹುದ್ದೆಗಳನ್ನು ಭರ್ತಿ ಮಾಡಬೇಕು, ಹಳೆಯ ಪಿಂಚಣಿ ವ್ಯವಸ್ಥೆ ಪುನಃ ಜಾರಿಗೊಳಿಸಬೇಕು ಹಾಗೂ ನಿವೃತ್ತರ ಪಿಂಚಣಿ ಪರಿಷ್ಕರಿಸಬೇಕು ಎಂದು ಒತ್ತಾಯಿಸಿದರು.

ಎಸ್‌ಬಿಐ, ಕೆನರಾ ಬ್ಯಾಂಕ್, ಯೂನಿಯನ್ ಬ್ಯಾಂಕ್, ಪಂಜಾಬ್ ನ್ಯಾಷನಲ್ ಬ್ಯಾಂಕ್, ಕರ್ನಾಟಕ ಬ್ಯಾಂಕ್, ಕರ್ನಾಟಕ ಗ್ರಾಮೀಣ ಬ್ಯಾಂಕ್ ಸೇರಿದಂತೆ ವಿವಿಧ ಬ್ಯಾಂಕ್‌ಗಳ ನೌಕರರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

## ಅವೈಜ್ಞಾನಿಕ ಪ್ಲಾನ್ ಕೈಬಿಡಲು ಆಗ್ರಹಿಸಿ ಪ್ರತಿಭಟನೆ



ಶಿವಮೊಗ್ಗ, ಸೆ.11: ಕರ್ನಾಟಕ ಸರ್ಕಾರದ ವಿವಿಧ ಜಿಲ್ಲೆಗಳ ಪಟ್ಟಣ ಪಂಚಾಯಿತಿಗಳಿಗೆ ಪ್ರಕಟಿಸಿರುವ ರೋಡ್ ನೆಟ್ವರ್ಕ್ ಗ್ರಿಡ್ ಪ್ಲಾನ್ ಪೈಕಿ ಹೊಳೆಹೊನ್ನೂರು ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಪ್ರಕಟಿಸಿರುವ ಅವೈಜ್ಞಾನಿಕ ಪ್ಲಾನ್ ಕೈಬಿಡಬೇಕು ಎಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ವತಿಯಿಂದ ಇಂದು ರಾಜ್ಯಾಧ್ಯಕ್ಷ ಹೆಚ್.ಆರ್. ಬಸವರಾಜಪ್ಪ ನೇತೃತ್ವದಲ್ಲಿ ರೈತ ಮುಖಂಡರು ಮೆರವಣಿಗೆಯಲ್ಲಿ ಬಂದು ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯ ಸಹಾಯಕ ನಿರ್ದೇಶಕರಿಗೆ ಮನವಿ ಸಲ್ಲಿಸಿದರು.

ರೋಡ್ ನೆಟ್ವರ್ಕ್ ಗ್ರಿಡ್ ಪ್ಲಾನ್ ಅಧಿಸೂಚನೆ ಹೊರಡಿಸಿ ಒಂದು ತಿಂಗಳಾದರೂ ಬಾಧಿತ ಗ್ರಾಮಗಳಿಗೆ ಮತ್ತು ಸಂಬಂಧಪಟ್ಟ ರೈತರಿಗೆ ಈ ವಿಚಾರ ಗಮನಕ್ಕೆ ಬಂದಿಲ್ಲ. ಯಾವ ಯಾವ ಗ್ರಾಮ ಗಳಲ್ಲಿ ಯಾವ ಸರ್ವೆ ನಂಬರ್ ನಲ್ಲಿ ಹೋಗುತ್ತದೆ ಎಂಬುದು ಆ ಜಮೀನಿನ ರೈತರಿಗೆ ತಿಳುವಳಿಕೆಗೆ ಬಂದಿಲ್ಲ. ಈಗಿರುವ ರೋಡ್ ನೆಟ್ವರ್ಕ್ ಗ್ರಿಡ್ ಪ್ಲಾನ್ ಅವೈಜ್ಞಾನಿಕ ವಾಗಿ ಕೆರೆಗಳ ಮೇಲೆ, ಗುಡ್ಡದ ಮೇಲೆ, ಹಳ್ಳ ಕೊಳ್ಳಗಳ ಮೇಲೆ ಹಾಗೂ ಈಗಿರುವ ಮುಖ್ಯ ರಸ್ತೆಗಳ ಅಕ್ಕಪಕ್ಕದಲ್ಲೇ ಹಾದು ಹೋಗುವುದರಿಂದ ಸಂಪೂರ್ಣ ಅವೈಜ್ಞಾನಿಕವಾಗಿದೆ.

ಇದರಲ್ಲಿ ಸಣ್ಣ ಮತ್ತು ಅತೀ ಸಣ್ಣ ರೈತರೇ ಇದ್ದಾರೆ. ಅವರೆಲ್ಲರೂ ಕೃಷಿಯನ್ನೇ ನಂಬಿ ಬದುಕುತ್ತಿದ್ದಾರೆ. ರಸ್ತೆ ಮಾಡಿದರೆ ಆರ್ಥಿಕ ನಷ್ಟಕ್ಕೊಳಗಾಗಿ ರೈತರು ಆತ್ಮಹತ್ಯೆ ಮಾಡಿಕೊಳ್ಳುವ ಪರಿಸ್ಥಿತಿ ಬರುತ್ತದೆ. ಆದ್ದರಿಂದ ಯಾವ ರೈತರ ಜಮೀನಿನಲ್ಲಿ ಹಾದು ಹೋಗುತ್ತದೆಯೋ ಅವರಿಗೆ ರಿಜಿಸ್ಟರ್ ಅಂಚೆ ಮೂಲಕ ಪತ್ರ ಕಳುಹಿಸಿ ಅವರಿಂದ ಅಭಿಪ್ರಾಯ ಪಡೆದು ಮುಂದಿನ ಕ್ರಮಕ್ಕೆ ಮುಂದಾಗಬೇಕು. ಎಲ್ಲಾ ಕಾರಣದಿಂದ ಅವೈಜ್ಞಾನಿಕವಾದ ರಸ್ತೆಯನ್ನು ಕೈಬಿಡಬೇಕಾಗಿ ಮನವಿಯಲ್ಲಿ ಕೋರಿದ್ದಾರೆ.

ಶಿವಮೊಗ್ಗ ಗ್ರಾಮಾಂತರ ಶಾಸಕಿ ಶ್ರೀಮತಿ ಶಾರದಾ ಪೂರ್ಯಾ ನಾಯ್ಕ್, ಪ್ರಮುಖರಾದ ಕೆ.ರಾಘವೇಂದ್ರ, ಸಿ. ಚಂದ್ರಪ್ಪ, ಟಿ.ಎನ್. ಚಂದ್ರಪ್ಪ, ಹುಬ್ಬರಾಜು ಸೇರಿದಂತೆ ಇನ್ನಿತರರಿದ್ದರು.

## ಬಸವಣ್ಣನ ಪುತ್ಥಳಿಗೆ ಮಾಲಾರ್ಪಣೆ: ಹೆಚ್.ಸಿ. ಯೋಗೇಶ್‌ಗೆ ಅಭಿನಂದನೆ



(ಹೊಸನಾವಿಕ)

ಶಿವಮೊಗ್ಗ, ಸೆ. 11: ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರಾಗಿ ಆಯ್ಕೆ ಯಾದ ಬಳಿಕ ಇದೇ ಮೊದಲ ಬಾರಿಗೆ ಶಿವಮೊಗ್ಗ ನಗರಕ್ಕೆ ಆಗಮಿಸಿದ ನೂತನ ಅಧ್ಯಕ್ಷ ಹೆಚ್.ಸಿ. ಯೋಗೇಶ್ ಅವರನ್ನು ಕಾಂಗ್ರೆಸ್ ಮುಖಂಡರು ಹಾಗೂ ಕಾರ್ಯಕರ್ತರು ಆತ್ಮೀಯವಾಗಿ ಅಭಿನಂದಿಸಿದರು.

ಶಿವಮೊಗ್ಗ ಜಿಲ್ಲಾ ಎನ್‌ಎಸ್‌ಯುಐ ಹಾಗೂ ಯುವ ಕಾಂಗ್ರೆಸ್ ವತಿಯಿಂದ ಇಂದು ಡಿವಿಎಸ್ ವೃತ್ತದಲ್ಲಿರುವ ಬಸವಣ್ಣನ ಪುತ್ಥಳಿಗೆ ಹೆಚ್.ಸಿ. ಯೋಗೇಶ್ ಅವರು ಮಾಲಾರ್ಪಣೆ ಮಾಡಿ ಗೌರವ ಸಲ್ಲಿಸಿದರು.

ಈ ಸಂದರ್ಭದಲ್ಲಿ ಜವಳಿ ನಿಗಮದ ಅಧ್ಯಕ್ಷ ಚೇತನ್, ಕಾಂಗ್ರೆಸ್ ಮುಖಂಡರಾದ ರಮೇಶ್ ಹೆಗ್ಡೆ, ಎಸ್.ಪಿ. ದಿನೇಶ್, ಕಾಶಿ ವಿಶ್ವನಾಥ್, ಯಮುನಾ ರಂಗೇ ಗೌಡ, ಸೈಯದ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶಿವಕುಮಾರ್, ಚಿರಂಜೀವಿ ಬಾಬು, ಮಧು ಸೂದನ್, ಗಿರೀಶ್, ಎನ್‌ಎಸ್‌ಯುಐ ಜಿಲ್ಲಾಧ್ಯಕ್ಷ ವಿಜಯ್, ಕಾರ್ಯಾಧ್ಯಕ್ಷ ಕಾಟಿಕೆರೆ ರವಿ, ನಗರಾಧ್ಯಕ್ಷ ರವಿಕುಮಾರ್, ಚಂದ್ರೋಜಿರಾವ್ ಸುಭಾನ್, ಫಾರಾಜ್, ಆದಿತ್ಯ, ಶ್ರೀಕಾಂತ್ ಹಾಗೂ ಪಂಕಜ್ ಉಪಸ್ಥಿತರಿದ್ದರು.

ಯುವ ಕಾಂಗ್ರೆಸ್‌ನ ಶಿವಮೊಗ್ಗ ಗ್ರಾಮಾಂತರ ಅಧ್ಯಕ್ಷ ಪ್ರವೀಣ್, ಪ್ರಧಾನ ಕಾರ್ಯದರ್ಶಿಗಳಾದ ಅಬ್ದುಲ್ ಸತ್ತಾರ್, ಆಕಾಶ್, ಮಲಗೊಪ್ಪ ಶಿವು, ಬಾಬು, ತೋಫಿಕ್ ಸೇರಿದಂತೆ ಹಲವು ಯುವ ಮುಖಂಡರು ಹಾಗೂ ಕಾರ್ಯಕರ್ತರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

## ಮೆಗ್ಗಾನ್‌ನಲ್ಲಿ ನೂತನ ಎಚ್‌ಎಲ್‌ಎ ಪ್ರಯೋಗಾಲಯ ಉದ್ಘಾಟನೆ

(ಹೊಸನಾವಿಕ)

ಶಿವಮೊಗ್ಗ, ಸೆ. 11: ನಗರದ ಮೆಗ್ಗಾನ್ ಬೋಧನಾ ಜಿಲ್ಲಾ ಆಸ್ಪತ್ರೆಯಲ್ಲಿ ಅಂಗಾಂಗ ಕಸಿ ಪ್ರಕ್ರಿಯೆಗೆ ನೆರವಾಗುವ ನೂತನ ಎಚ್‌ಎಲ್‌ಎ ಪ್ರಯೋಗಾಲಯ ವನ್ನು ಉದ್ಘಾಟಿಸಲಾಯಿತು.



ಅಂಗಾಂಗ ಕಸಿಯಲ್ಲಿ ದಾನಿ ಮತ್ತು ಸ್ವೀಕರಿಸುವವರ ಹೊಂದಾಣಿಕೆ ಹಾಗೂ ಟ್ರಾನ್ಸ್‌ಪ್ಲಾಂಟ್ ಇಮ್ಯುನಾಲಜಿಗೆ ಸಂಬಂಧಿಸಿದ ಪ್ರಮುಖ ಪರೀಕ್ಷೆಗಳನ್ನು ಕೈಗೊಳ್ಳಲು ಈ ಪ್ರಯೋಗಾಲಯ ದಿಂದ ಹೆಚ್ಚಿನ ಅನುಕೂಲವಾಗಲಿದೆ. ಇದರಿಂದ ಆಸ್ಪತ್ರೆಯ ಅಂಗಾಂಗ ಕಸಿ ಸೇವೆಗಳ ಗುಣಮಟ್ಟ ಮತ್ತು ಕಾರ್ಯಕ್ಷಮತೆ ಮತ್ತಷ್ಟು ಸುಧಾರಿಸುವ ನಿರೀಕ್ಷೆ ಇದೆ.

ಕಾರ್ಯಕ್ರಮದಲ್ಲಿ ಹಣಕಾಸು ಸಲಹೆಗಾರ ಝೀವಲ್ ಖಾನ್, ವೈದ್ಯಕೀಯ ಅಧೀಕ್ಷಕ ಡಾ. ಟಿ.ಡಿ. ತಿಮ್ಮಪ್ಪ, ಟ್ರಾನ್ಸ್‌ಫ್ಯೂಷನ್ ಮೆಡಿಸಿನ್ ಮತ್ತು (4ನೇ ಪುಟಕ್ಕೆ)

## ನಾಳೆ ಗಾಂಧಿ ಪ್ರತಿಮೆವರೆಗೆ ಕಾಂಗ್ರೆಸ್ ಪ್ರತಿಭಟನಾ ಮೆರವಣಿಗೆ

(ಹೊಸನಾವಿಕ)

ಶಿವಮೊಗ್ಗ, ಸೆ.11: ಎಐಸಿಸಿ ಅಧ್ಯಕ್ಷರು ನಡೆಸಿದ ಬಹಿರಂಗ ಸಭೆಯ ಸ್ಥಳವನ್ನು ಬಿಜೆಪಿ ಕಾರ್ಯಕರ್ತರು ಶುದ್ಧೀಕರಣ ಗೊಳಿಸಿರುವುದನ್ನು ಖಂಡಿಸಿ ಜಿಲ್ಲಾ ಕಾಂಗ್ರೆಸ್ ವತಿಯಿಂದ ಸೆ.12ರಂದು ಪ್ರತಿಭಟನಾ ಮೆರವಣಿಗೆ ಹಮ್ಮಿಕೊಳ್ಳಲಾಗಿದೆ.

ಸೆ.12ರ ನಾಳೆ ಬೆಳಗ್ಗೆ 10.30ಕ್ಕೆ ಜಿಲ್ಲಾ ಕಾಂಗ್ರೆಸ್ ಕಚೇರಿಯಿಂದ ಗಾಂಧಿ ಪಾರ್ಕಿನ ಮಹಾತ್ಮ ಗಾಂಧಿ ಪ್ರತಿಮೆಯವರೆಗೆ ಮೆರವಣಿಗೆ ನಡೆಯಲಿದೆ. ಕರ್ನಾಟಕ ಪ್ರದೇಶ ಕಾಂಗ್ರೆಸ್ ಪ್ರಚಾರ ಸಮಿತಿಯ ಉಪಾಧ್ಯಕ್ಷ ಕಿಮ್ಮನೆ ರತ್ನಾಕರ್ ನೇತೃತ್ವ ವಹಿಸಲಿದ್ದಾರೆ.

ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಆರ್. ಪ್ರಸನ್ನಕುಮಾರ್ ಪ್ರತಿಭಟನೆಯ ಅಧ್ಯಕ್ಷತೆ ವಹಿಸಲಿದ್ದು, ನಿಯೋಜಿತ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಎಚ್.ಸಿ. ಯೋಗೇಶ್, ಜಿಲ್ಲಾ ಕಾಂಗ್ರೆಸ್ ಪ್ರಚಾರ ಸಮಿತಿ ಅಧ್ಯಕ್ಷ ರಮೇಶ್ ಹೆಗಡೆ ಉಪಸ್ಥಿತರಿರುವರು.

ಜಿಲ್ಲೆಯ ಶಾಸಕರು, ಕೆಪಿಸಿಸಿ ಹಾಗೂ ಜಿಲ್ಲಾ ಕಾಂಗ್ರೆಸ್ ಪದಾಧಿಕಾರಿಗಳು, ವಿವಿಧ ನಿಗಮ-ಮಂಡಳಿಗಳ ಅಧ್ಯಕ್ಷರು, ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಲು ಕೋರಲಾಗಿದೆ.

## ಶಿವಮೊಗ್ಗ ಗ್ರಾಮಾಂತರ ವಿಧಾನಸಭಾ ಕ್ಷೇತ್ರ ಶಾಸಕರ ಹೋಬಳಿ ಮಟ್ಟದ ಪ್ರಜಾಸೇವೆ ಸಭೆ

(ಹೊಸನಾವಿಕ)

ಶಿವಮೊಗ್ಗ, ಸೆ.11: ಶಿವಮೊಗ್ಗ ಗ್ರಾಮಾಂತರ ವಿಧಾನಸಭಾ ಕ್ಷೇತ್ರ ಶಾಸಕಿ ಶ್ರೀಮತಿ ಶಾರದಾ ಪೂರ್ಯಾನಾಯ್ಕ ಅವರು ಸೆ.12 ರಂದು ಬೆಳಗ್ಗೆ 10ಕ್ಕೆ ಹಾರನಹಳ್ಳಿ ಅಂಬೇಡ್ಕರ್ ಭವನದಲ್ಲಿ ಹಾರನಹಳ್ಳಿ ಹೋಬಳಿ ಮಟ್ಟದ ಪ್ರಜಾಸೇವೆ ಆಂದೋಲನ ಸಭೆಯಲ್ಲಿ ಭಾಗವಹಿಸಲಿದ್ದಾರೆ.

ಸಾರ್ವಜನಿಕರು ತಮ್ಮ ಅಹವಾಲುಗಳು ಸೇರಿದಂತೆ ಸರ್ಕಾರ ವಿವಿಧ ಯೋಜನೆಗಳ ಸವಲತ್ತು ಪಡೆಯಲು ಅರ್ಜಿ ಸಲ್ಲಿಸಿ, ಸಮಸ್ಯೆಗಳಿಗೆ ಪರಿಹಾರ ಪಡೆದುಕೊಳ್ಳುವಂತೆ ಶಿವಮೊಗ್ಗ ತಾಲೂಕು ತಹಶೀಲ್ದಾರ್ ಪ್ರಕಟಣೆಯಲ್ಲಿ ತಿಳಿಸಿರುತ್ತಾರೆ.

## ಸೆ.25: ಕಾಮನ್ ಮ್ಯಾನ್ ನಾನೇ ಸಿಎಂ ಚಲನ ಚಿತ್ರ ಬಿಡುಗಡೆ: ಬೇಕ್ರಿ ರಮೇಶ್

(ಹೊಸನಾವಿಕ)

ಶಿವಮೊಗ್ಗ, ಸೆ.11: ಸಾಮಾನ್ಯ ಪ್ರಜೆಯೊಬ್ಬನಿಗೆ ಅಧಿಕಾರದ ಗದ್ದುಗೆ ದೊರೆತರೆ ಜನರ ಬದುಕು ಹಾಗೂ ಆಡಳಿತ ವ್ಯವಸ್ಥೆಯಲ್ಲಿ ಯಾವ ರೀತಿಯ ಬದಲಾವಣೆ ತರಬಹುದು ಎಂಬುದನ್ನು ಬಿಂಬಿಸುವ ಕನ್ನಡ ಚಲನಚಿತ್ರ ಕಾಮನ್ ಮ್ಯಾನ್ ನಾನೇ ಸಿಎಂ ಸೆ.25ರಂದು ರಾಜ್ಯಾದ್ಯಂತ ಬಿಡುಗಡೆಯಾಗಲಿದೆ ಎಂದು ಕದಂಬ ಸೈನ್ಯ ಕನ್ನಡ ಸಂಘಟನೆಯ ರಾಜ್ಯ ಘಟಕದ ಅಧ್ಯಕ್ಷ ಬೇಕ್ರಿ ರಮೇಶ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸುರಭಿ ಫಿಲಂಸ್ ಸಂಸ್ಥೆಯಡಿ ರಂಗಭೂಮಿ ಕಲಾವಿದ ಡಾ. ಎನ್. ನರಸಿಂಹ ಮೂರ್ತಿ ಕಥೆ ಬರೆದು, ನಿರ್ಮಿಸಿ, ಮುಖ್ಯಮಂತ್ರಿಯ ಪಾತ್ರದಲ್ಲಿ



ಅಭಿನಯಿಸಿದ್ದಾರೆ. ಹಿರಿಯ ನಿರ್ದೇಶಕ ಓಂ ಸಾಯಿಪ್ರಕಾಶ್ ಚಿತ್ರವನ್ನು ನಿರ್ದೇಶಿಸಿದ್ದಾರೆ ಎಂದರು.

ಜನರ ಬದುಕಿನೊಂದಿಗೆ ಬೆಸೆದುಕೊಂಡಿರುವ ಪ್ರಜ್ಞಾವಂತ ವಕೀಲನೊಬ್ಬನಿಗೆ ಅಧಿಕಾರ ದೊರೆತಾಗ ಆತ ವ್ಯವಸ್ಥೆಯಲ್ಲಿ ಯಾವ ಬದಲಾವಣೆ ತರಬಹುದು ಎಂಬುದು ಚಿತ್ರದ ಪ್ರಮುಖ ಕಥಾವಸ್ತು. ಅನ್ಯಾಯ, ಭ್ರಷ್ಟಾಚಾರ, ಕಾನೂನು ಸುವ್ಯವಸ್ಥೆ ಹಾಗೂ ಜನಸಾಮಾನ್ಯರು ಎದುರಿಸುವ ಸಮಸ್ಯೆಗಳನ್ನು ಚಿತ್ರದಲ್ಲಿ ಪ್ರಸ್ತಾಪಿಸಲಾಗಿದೆ ಎಂದರು.

ಸೋನಾ ಲಾಡ್ವಾ ಹಾಗೂ ಸಬ್ಬಿ ಸೂರಿ ನಾಯಕಿಯರಾಗಿ ಅಭಿನಯಿಸಿದ್ದಾರೆ. ಯುವಜನರಲ್ಲಿ ರಾಜಕೀಯ ಹಾಗೂ ಆಡಳಿತದ ಹೊಣೆಗಾರಿಕೆ ಕುರಿತು ಚಿಂತನೆ ಮೂಡಿಸುವ ಉದ್ದೇಶ ಚಿತ್ರಕ್ಕಿದೆ ಎಂದು ಚಿತ್ರತಂಡ ತಿಳಿಸಿದೆ. ನಟ-ನಿರ್ದೇಶಕ ಗೌರಿಶಂಕರ್ ಸೇರಿದಂತೆ ಹಲವರು ಚಿತ್ರಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಡಾ. ರಾಜ್ ಕುಮಾರ್ ಅಭಿಮಾನಿ ಬಳಗದ ಅಧ್ಯಕ್ಷ ಮಾ. ಮಹಾದೇವ ಸ್ವಾಮಿ, ಸತೀಶ್ ಎಲೆ ಚಾರನಹಳ್ಳಿ, ವೈ. ಎನ್. ಮಹೇಶ್, ಎಮ್ಮರಡ್ಡಿ ನಾಗೇಶ್ ಇದ್ದರು.

## ವಾಮಾಚಾರ ಪರಿಹಾರದ ಹೆಸರಿನಲ್ಲಿ ವಂಚನೆ: ಆರೋಪಿ ಮುರಳಿ ಅರೆಸ್ಟ್

(ಹೊಸನಾವಿಕ)

ಭದ್ರಾವತಿ, ಸೆ.11: ವಾಮಾಚಾರ ಪರಿಹರಿಸುವುದಾಗಿ ನಂಬಿಸಿ ಮಹಿಳೆಯೊಬ್ಬರಿಂದ ಲಕ್ಷಾಂತರ ರೂ. ಮೌಲ್ಯದ ಚಿನ್ನಾಭರಣ ಹಾಗೂ ನಗದು ಪಡೆದು ವಂಚಿಸಿದ್ದ ಆರೋಪಿ ಯನ್ನು ಹೊಸಮನೆ ಶಿವಾಜಿ ಸರ್ಕಲ್ ಠಾಣೆ ಪೊಲೀಸರು ಕೆಲವೇ ಗಂಟೆಗಳಲ್ಲಿ ಬಂಧಿಸಿದ್ದಾರೆ.

ಗಾಂಧಿನಗರ ನಿವಾಸಿ ಹಾಗೂ ಕೆಎಸ್‌ಆರ್‌ಟಿಸಿ ಕಿರಿಯ ಸಹಾಯಕಿ ಮಂಗಳ ನಾಯ್ಕ್ ಅವರು ಸೆ.7 ರಂದು ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಲಾಗಿದೆ. ಪರಿಚಿತರಾದ ಮುರಳಿ ಹಾಗೂ ಆತನ ಸಹೋದರ ರವಿ, ತಮ್ಮ ಮೇಲೆ ವಾಮಾಚಾರ ಪ್ರಯೋಗ ವಾಗಿದ್ದು, ಪರಿಹಾರ ಮಾಡದಿದ್ದರೆ ತಮಗೂ ಮಕ್ಕಳಿಗೂ ತೊಂದರೆ ಯಾಗಲಿದೆ ಎಂದು ಭಯ



ಹುಟ್ಟಿಸಿದ್ದರು. ಬಳಿಕ ಮನೆಗೆ ಬಂದು ಪೂಜೆ ನಡೆಸಿ, ಚಿನ್ನಾಭರಣ ಹಾಗೂ ನಗದನ್ನು ವಿಶೇಷ ಪೂಜೆ ಮಾಡಿ ಮರಳಿಸುವುದಾಗಿ ನಂಬಿಸಿದ್ದರು.

ಅವರ ಮಾತು ನಂಬಿದ ಮಂಗಳ ನಾಯ್ಕ್ ಸುಮಾರು 193 ಗ್ರಾಂ ಚಿನ್ನಾಭರಣ ಹಾಗೂ ರೂ.2 ಲಕ್ಷ ನಗದನ್ನು ನೀಡಿದ್ದರು. ಆದರೆ ಅವುಗಳನ್ನು ವಾಪಸ್ ನೀಡದೆ ವಂಚಿಸಲಾಗಿದೆ ಎಂದು ದೂರಿನಲ್ಲಿ ಆರೋಪಿಸಿದ್ದಾರೆ.

ತನಿಖೆ ಕೈಗೊಂಡ ಪೊಲೀಸರು ತಿಪ್ಲಾಪುರ ಕ್ಯಾಂಪ್ ನಿವಾಸಿ ಮುರಳಿ ಅಲಿಯಾಸ್ ಕರಿಯಾ (31)ನನ್ನು ಬಂಧಿಸಿ, ಸುಮಾರು ರೂ.22.50 ಲಕ್ಷ ಮೌಲ್ಯದ 161 ಗ್ರಾಂ ಚಿನ್ನಾಭರಣ ಹಾಗೂ ಚಿನ್ನದ ಗಟ್ಟಿಯನ್ನು ವಶಪಡಿಸಿಕೊಂಡಿದ್ದಾರೆ. ಆರೋಪಿಯು ಕೆಲ ಚಿನ್ನಾಭರಣ ವನ್ನು ಗಿರವಿ ಇಟ್ಟಿದ್ದು, ಮತ್ತಷ್ಟು ಚಿನ್ನವನ್ನು ಕರಗಿಸಿ ಗಟ್ಟಿಯಾಗಿ ಪರಿವರ್ತಿಸಿ ಮನೆಯಲ್ಲಿ ಬಚ್ಚಿಟ್ಟಿದ್ದ ಎನ್ನಲಾಗಿದೆ.

ಡಿವೈಎಸ್‌ಪಿ ಪ್ರಕಾಶ್ ರಾಥೋಡ್ ಮೇಲ್ವಿಚಾರಣೆಯಲ್ಲಿ, ನಗರ ವೃತ್ತ ನಿರೀಕ್ಷಕಿ ಕೆ. ನಾಗಮ್ಮ ಮಾರ್ಗದರ್ಶನದಲ್ಲಿ ಹೊಸಮನೆ ಶಿವಾಜಿ ಸರ್ಕಲ್ ಪೊಲೀಸ್ ಠಾಣೆ ಉಪ ನಿರೀಕ್ಷಕ ಎಂ.ಪಿ ಸಿದ್ದಪ್ಪ, ಸಿಬ್ಬಂದಿಗಳಾದ ಆದರ್ಶ ಶೆಟ್ಟಿ, ಮನ್ಸೂದ್ ಖಾನ್, ಆಸ್ಟಿನ್, ಬಿ.ಎನ್ ಕಾಂತರಾಜ, ಹಣಮಂತ ಅವಟಿ, ಸುನೀತಾ ಹಾಗೂ ಶ್ರೀಧರ್ ಅವರ ತಂಡ ಈ ಕಾರ್ಯಾಚರಣೆ ನಡೆಸಿದೆ.

## ಸೆ.15: ಇಂಜಿನಿಯರ್ಸ್ ಡೇ: ಸಾಧಕರಿಗೆ ಪ್ರಶಸ್ತಿ ಪ್ರದಾನ

(ಹೊಸನಾವಿಕ)

ಶಿವಮೊಗ್ಗ, ಸೆ.11: ಭಾರತರತ್ನ ಸರ್ ಎಂ. ವಿಶ್ವೇಶ್ವರಯ್ಯ ಅವರ ಜನ್ಮದಿನಾಚರಣೆ ಅಂಗವಾಗಿ ಇಂಜಿನಿಯರ್ಸ್ ಡೇ ಕಾರ್ಯಕ್ರಮವನ್ನು ಸೆ.15ರಂದು ಸಂಜೆ 5ಕ್ಕೆ ನಗರದ ವಾಣಿಜ್ಯ ಸಂಘದ ಸಭಾಂಗಣದಲ್ಲಿ ಆಯೋಜಿಸ ಲಾಗಿದೆ ಎಂದು ಸಂಘದ ಅಧ್ಯಕ್ಷ ಬಿ. ಗೋಪಿನಾಥ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದೇಶದ ಆಧುನಿಕ ನಿರ್ಮಾಣ ಹಾಗೂ ಅಭಿವೃದ್ಧಿಗೆ ಸರ್ ಎಂ. ವಿಶ್ವೇಶ್ವರಯ್ಯ ಅವರ ಕೊಡುಗೆ ಅಪಾರ. ನೀರಾವರಿ, ಕೃಷಿ, ವಿದ್ಯುತ್, ಕೈಗಾರಿಕೆ, ಶಿಕ್ಷಣ ಹಾಗೂ ಸಾಹಿತ್ಯ ಕ್ಷೇತ್ರಗಳಲ್ಲಿ ಅವರು ದೂರದರ್ಶಿತ್ವದ ಯೋಜನೆಗಳನ್ನು ರೂಪಿಸಿದ್ದರು. ಕರ್ನಾಟಕ, ಅದರಲ್ಲೂ ಶಿವಮೊಗ್ಗ ಜಿಲ್ಲೆಯ ಅಭಿವೃದ್ಧಿಗೆ ಅವರ ಕೊಡುಗೆ ಅವಿಸ್ಮರಣೀಯ ಎಂದರು.

ಶಾಸಕ ಎಸ್.ಎನ್. ಚನ್ನಬಸಪ್ಪ ಕಾರ್ಯಕ್ರಮ ಉದ್ಘಾಟಿಸಲಿದ್ದು, ಜಿಲ್ಲಾಧಿಕಾರಿ ಪ್ರಭುಲಿಂಗ ಕವಳಿಕಟ್ಟಿ ಮುಖ್ಯ ಅತಿಥಿಯಾಗಿ ಪಾಲ್ಗೊಳ್ಳುವರು. ಸಂಘದ ಅಧ್ಯಕ್ಷ ಬಿ. ಗೋಪಿನಾಥ್ ಅಧ್ಯಕ್ಷತೆ ವಹಿಸುವರು.

ಇಂಜಿನಿಯರ್ಸ್ ಡೇ ಅಂಗವಾಗಿ ಪ್ರೌಢಶಾಲಾ ವಿದ್ಯಾರ್ಥಿ



ಗಳಿಗೆ ರಸಪ್ರಶ್ನೆ ಹಾಗೂ ಪಿಯು ವಿದ್ಯಾರ್ಥಿಗಳಿಗೆ ಭಾಷಣ ಸ್ಪರ್ಧೆ ಆಯೋಜಿಸಲಾಗಿದೆ. ವಿಜೇತರಿಗೆ ಪ್ರಥಮ, ದ್ವಿತೀಯ ಮತ್ತು ತೃತೀಯ ನಗದು ಬಹುಮಾನ ನೀಡಲಾಗುವುದು. ಪ್ರಥಮ ಸ್ಥಾನ ಪಡೆದ ಹೈಸ್ಕೂಲ್ ಹಾಗೂ ಪಿಯು ಕಾಲೇಜಿಗೆ ಪಾರಿತೋಷಕ ನೀಡಲಾ ಗುತ್ತದೆ. ಭಾಷಣ ಸ್ಪರ್ಧೆಯಲ್ಲಿ ಪ್ರಥಮ ಹಾಗೂ ದ್ವಿತೀಯ ಸ್ಥಾನ ಪಡೆದ ವಿದ್ಯಾರ್ಥಿಗಳಿಗೆ ಸರ್ ಎಂ. ವಿಶ್ವೇಶ್ವರಯ್ಯ ಅವರ ಕುರಿತು ವಿಶೇಷ ಭಾಷಣಕ್ಕೆ ಅವಕಾಶ ಕಲ್ಪಿಸಲಾಗುವುದು ಎಂದರು.

ಕೈಗಾರಿಕಾ ಕ್ಷೇತ್ರದಲ್ಲಿ ವಿಶೇಷ ಸಾಧನೆ ಮಾಡಿದ ಶಿವಮೊಗ್ಗದ ಎಸ್‌ಜಿಎಂ ಟೆಕ್ನಾಲಜೀಸ್ ಹಾಗೂ ಭದ್ರಾವತಿಯ ಶ್ರೀವಾಸವಿ ಫೌಂಡ್ರಿ ಪ್ರೈ.ಲಿ. ಸಂಸ್ಥೆಗಳಿಗೆ 2026ನೇ ಸಾಲಿನ ಹೆಮ್ಮೆಯ ಕೈಗಾರಿಕಾ ಪ್ರಶಸ್ತಿ ನೀಡಿ ಗೌರವಿಸಲಾಗುವುದು. ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಸಾಧನೆ ಮಾಡಿದ ಶಿವಮೊಗ್ಗದ ಸಿಲಿಕಾನ್ ಸಾಫ್ಟ್‌ವೇರ್ ಸಂಸ್ಥೆಗೆ ವಿಶೇಷ ಪುರಸ್ಕಾರ ನೀಡಲಾಗುವುದು.

ಕೈಗಾರಿಕಾ ಕ್ಷೇತ್ರದಲ್ಲಿ ದೀರ್ಘಕಾಲ ಅತ್ಯುತ್ತಮ ಸೇವೆ ಸಲ್ಲಿಸಿದ ಶಾಂತಲಾ ಸ್ಪೇರೋಕ್ಯಾಸ್ಟ್ ಪ್ರೈ.ಲಿ., ಮಾಚೇನಹಳ್ಳಿ, ಭಾಸ್ಕರ್ ಆರ್. ಹಾಗೂ ಟೆಕ್ನೋರಿಂಗ್ಸ್ ಪ್ರೈ.ಲಿ., ಸಾಗರ ರಸ್ತೆಯ ಮೋಹನ್ ಕುಮಾರ್ ಎನ್. ಅವರನ್ನು ಅತ್ಯುತ್ತಮ ಕಾರ್ಮಿಕ ಪ್ರಶಸ್ತಿ ನೀಡಿ ಸನ್ಮಾನಿಸಲಾಗುವುದು.

ಸುದ್ದಿಗೋಷ್ಠಿಯಲ್ಲಿ ಎಂ. ಶಂಕರ್, ಉದಯ್ ಕುಮಾರ್ ಹಾಗೂ ಸುರೇಶ್ ಉಪಸ್ಥಿತರಿದ್ದರು.



ಪ್ರೊ। ಸತ್ಯನಾರಾಯಣ
ನಿವೃತ್ತ ಪ್ರಾಂಶುಪಾಲರು-ಕವಿಗಳು

**ಮಲ್ಲಿಗೆ**

ಊರ ಮಲ್ಲಿಗೆ
ಬೀರಿತು ನಗುವನ್ನು
ಕಾಡ ಮಲ್ಲಿಗೆ
ಬೀರಿತು ದುಃಖವನ್ನು

## ಹೊಸನಾವಿಕ - ನಾಳಿನ ಭವಿಷ್ಯ

**ಮೇಷ** ದುಃಖಿತರಾಗಿ ಮತ್ತು ಖಿನ್ನರಾಗಿರಬೇಡಿ. ಇಂದು ನಿಮಗೆ ಅನೇಕ ಹೊಸ ಆರ್ಥಿಕ ಯೋಜನೆಗಳು ದೊರಕುತ್ತವೆ - ಯಾವುದೇ ಬದ್ಧತೆಗೊಳಗಾಗುವ ಮುನ್ನ ಸಾಧಕ ಬಾಧಕಗಳನ್ನು ಎಚ್ಚರಿಕೆಯಿಂದ ಪರಿಶೀಲಿಸಿ. ಅರ್ಹರಿಗೆ ವೈವಾಹಿಕ ಮೈತ್ರಿಗಳು. ಕೆಲವರಿಗೆ ಹೊಸ ಪ್ರಣಯ ನಿಮ್ಮ ಚೈತನ್ಯವನ್ನು ಪ್ರೇರೇಪಿಸಬಹುದು ಹಾಗೂ ನಿಮ್ಮನ್ನು ಹರ್ಷಚಿತ್ತರಾಗಿರಿಸಬಹುದು. ಹೆಚ್ಚು ಜನರನ್ನು ಭೇಟಿಯಾದಾಗ ಅಸಮಾಧಾನಗೊಳ್ಳುವಂತಹ ವ್ಯಕ್ತಿತ್ವ ನಿಮ್ಮದು ಮತ್ತು ನಿಮಗಾಗಿ ಸಾಮ್ಯವನ್ನು ತೆಗೆಯಲು ಪ್ರಯತ್ನಿಸುತ್ತೀರಿ.

**ವೃಷಭ** ನೀವು ಭಯವೆಂಬ ದೈತ್ಯನ ಜೊತೆ ಹೋರಾಡಲು ಸಿದ್ಧವಾಗುತ್ತಿದ್ದ ಹಾಗೆ ನಿಮ್ಮ ಆಲೋಚನೆಗಳನ್ನು ಸಕಾರಾತ್ಮಕವಾಗಿ ರೂಪಿಸಿಕೊಳ್ಳಿ. ಇಲ್ಲದಿದ್ದಲ್ಲಿ ನೀವು ಈ ರಾಕ್ಷಸನಿಗೆ ಒಬ್ಬ ಜಡ ಮತ್ತು ನಿಷ್ಕರುಣೆಯ ಬಲಿಯಾಗುತ್ತೀರಿ. ಸಣ್ಣ ಉದ್ಯೋಗವನ್ನು ಮಾಡುವ ಜನರು, ಇಂದು ತಮ್ಮ ಆಪ್ತರಿಂದ ಯಾವುದೇ ಸಲಹೆಯನ್ನು ಪಡೆಯಬಹುದು. ಇದರಿಂದ ಅವರಿಗೆ ಆರ್ಥಿಕವಾಗಿ ಲಾಭ ಪಡೆಯುವ ಸಾಧ್ಯತೆ ಇದೆ. ಕೌಟುಂಬಿಕ ಸಮಸ್ಯೆಗೆ ಮೊದಲ ಆದ್ಯತೆ ನೀಡಬೇಕು. ಧಾರ್ಮಿಕ ಮತ್ತು ಶುದ್ಧ ಪ್ರೀತಿಯನ್ನು ಅನುಭವಿಸಿ. ಸಂಗಾತಿಯಿಂದ ಒಂದು ಸಂತೋಷಮಯ ಆಶ್ಚರ್ಯವನ್ನು ಪಡೆಯುತ್ತೀರಿ.

**ಮಿಥುನ** ನಿಮ್ಮ ಶಕ್ತಿಯ ಮಟ್ಟ ಹೆಚ್ಚಿರುತ್ತದೆ ಮತ್ತು ನೀವು ಇದನ್ನು ಬಾಕಿಯಿರುವ ಕೆಲಸಗಳನ್ನು ಪೂರ್ಣಗೊಳಿಸಲು ಬಳಸಬೇಕು. ಹಣದ ಲಾಭ ನಿಮ್ಮ ನಿರೀಕ್ಷೆಯಂತಿರುವುದಿಲ್ಲ, ಸಂಜೆ ನಿಮ್ಮ ಮಕ್ಕಳೊಂದಿಗೆ ಸ್ವಲ್ಪ ಆಹ್ಲಾದಕರ ಸಮಯ ಕಳೆಯಿರಿ. ನಿಮ್ಮ ಪ್ರೇಮ ಜೀವನ ಶರದೃತುವಿನಲ್ಲಿನ ಮರದ ಎಲೆಯಂತಿರುತ್ತದೆ. ಈ ರಾಶಿಚಕ್ರದ ಜನರಿಗೆ ಇಂದು ತಮ್ಮನ್ನು ತಾವೇ ಅರ್ಥಮಾಡಿಕೊಳ್ಳುವ ಅಗತ್ಯವಿದೆ. ನೀವು ಪ್ರಪಂಚದ ಗುಂಪಿನಲ್ಲಿ ಎಲ್ಲೋ ಕಳೆದುಹೋಗಿದ್ದೀರಿ ಎಂದು ನೀವು ಭಾವಿಸಿದರೆ, ನಿಮಗಾಗಿ ಸಮಯವನ್ನು ತೆಗೆದುಕೊಳ್ಳಿ.

**ಕರ್ಕಾಟಕ** ಕೆಲಸದ ಒತ್ತಡ ಮತ್ತು ಮನೆಯಲ್ಲಿ ಅಪಶ್ರುತಿ ಸ್ವಲ್ಪ ಉದ್ವೇಗ ತರಬಹುದು. ಇಂದು ಯಾವುದೇ ವಿರುದ್ಧಲಿಂಗದ ಸಹಾಯದಿಂದ ನೀವು ವ್ಯಾಪರ ಅಥವಾ ಉದ್ಯೋಗದಲ್ಲಿ ಆರ್ಥಿಕ ಲಾಭವನ್ನು ಪಡೆಯುವ ಸಾಧ್ಯತೆ ಇದೆ. ಸಾಮಾಜಿಕ ಕೂಟಗಳಲ್ಲಿ ನಿಮ್ಮ ಹಾಸ್ಯದ ಪ್ರಕೃತಿ ನಿಮ್ಮನ್ನು ಜನಪ್ರಿಯಗೊಳಿಸುತ್ತದೆ. ಸಾಮಾಜಿಕ ಅಡೆತಡೆಗಳನ್ನು ದಾಟಲು ಸಾಧ್ಯವಾಗುವುದಿಲ್ಲ, ನೀವು ಸ್ನೇಹಿತರೊಂದಿಗೆ ಹೆಚ್ಚು ಸಮಯ ಕಳೆಯುವುದು ಸರಿ ಎಂದು ನೀವು ಭಾವಿಸಿದರೆ ನೀವು ತಪ್ಪು ಹಾಗೆ ಮಾಡುವುದರಿಂದ ನೀವು ಮುಂಬರುವ ಸಮಯದಲ್ಲಿ ಬಿಕ್ಕಟ್ಟುಗಳನ್ನು ಎದುರಿಸಬೇಕಾಗಬಹುದು.

**ಸಿಂಹ** ನಿಮ್ಮ ಸಕಾರಾತ್ಮಕ ದೃಷ್ಟಿಕೋನ ಮತ್ತು ಆತ್ಮವಿಶ್ವಾಸದಿಂದ ನಿಮ್ಮ ಸುತ್ತಲಿರುವ ಜನರನ್ನು ಪ್ರಭಾವಿಸಬಹುದಾದ ಸಾಧ್ಯತೆಗಳಿವೆ. ಇಂದು ಸಾಲಗಾರನು ನಿಮ್ಮ ಮನೆ ಬಾಗಿಲಿಗೆ ಬರಬಹುದು. ನಿಮ್ಮ ಹತ್ತಿರ ಸಾಲ ಕೇಳಬಹುದು. ಅವರಿಗೆ ಹಣವನ್ನು ಹಿಂದಿರುಗಿಸಿ ನೀವು ಆರ್ಥಿಕ ಬಿಕ್ಕಟ್ಟಿಗೆ ಸಿಲುಕಬಹುದು. ಸಾಲ ಪಡೆಯುವುದನ್ನು ತಪ್ಪಿಸಲು ನಿಮಗೆ ಸೂಚಿಸಲಾಗಿದೆ. ಇತರರಿಗೆ ಮುಜುಗರ ಉಂಟುಮಾಡಬೇಡಿ ಮತ್ತು ನಿಮ್ಮ ಕುಟುಂಬದ ಅವಶ್ಯಕತೆಗಳಿಗೆ ಹೊಂದಿಕೊಳ್ಳಲು ಪ್ರಯತ್ನಿಸಿ. ಒತ್ತಡದಿಂದ ಮುಕ್ತವಾಗಿರಲು ಪ್ರಯತ್ನಿಸಿ, ವಿಶ್ರಾಂತಿ ಪಡೆಯಲು ಒತ್ತಾಯಿಸಿ.

**ಕನ್ಯಾ** ಆರೋಗ್ಯ ಚೆನ್ನಾಗಿರುತ್ತದೆ. ನೀವು ತ್ವರಿತ ಹಣ ಪಡೆಯುವ ಬಯಕೆ ಹೊಂದಿರುತ್ತೀರಿ. ಜನರು ನಿಮಗೆ ಹೊಸ ಭರವಸೆ ಹಾಗೂ ಕನಸುಗಳನ್ನು ನೀಡುತ್ತಾರೆ. ಇದು ನಿಮ್ಮ ಸ್ವಸಾಮರ್ಥ್ಯವನ್ನು ಅವಲಂಬಿಸಿರುತ್ತದೆ. ಇಡೀ ಬ್ರಹ್ಮಾಂಡದ ಭಾವಪರವಶತೆ ಪ್ರೀತಿಯಲ್ಲಿರುವವರ ನಡುವೆ ನಡೆಯುತ್ತದೆ. ಹೌದು, ನೀವು ಅದೃಷ್ಟವಂತರು. ಮಿತಿಯಿಲ್ಲದ ಸೃಜನಶೀಲತೆ ಮತ್ತು ಉತಾಹ ನಿಮ್ಮನ್ನು ಮತ್ತೊಂದು ಅನುಕೂಲಕರ ದಿನಕ್ಕೆ ಕೊಂಡೊಯ್ಯುತ್ತದೆ. ಇತರರು ಹೇಳುವುದನ್ನು ಅಥವಾ ಸಲಹೆ ನೀಡುವುದನ್ನು ನಂಬದಿರಲು ಎಚ್ಚರಿಕೆ ವಹಿಸಿ.

**ತುಲಾ** ನಿಮ್ಮ ಮುಖದಲ್ಲಿ ನಿರಂತರವಾದ ನಗುವಿರುವ ಮತ್ತು ಅಪರಿಚಿತರೂ ಪರಿಚಿತರಂತೆ ತೋರುವ ಒಂದು ದಿನ. ಹಣಕ್ಕೆ ಸಂಬಂಧಿಸಿದ ಯಾವುದೇ ವಿಷಯ ನ್ಯಾಯಾಲಯ ಪ್ರಕರಣದಲ್ಲಿ ಸಿಲುಕಿಕೊಂಡಿದ್ದರೆ, ಇಂದು ನೀವು ಅದರಲ್ಲಿ ವಿಜಯವನ್ನು ಪಡೆಯಬಹುದು ಮತ್ತು ನೀವು ಹಣದ ಲಾಭವನ್ನು ಪಡೆಯಬಹುದು. ಸ್ನೇಹಿತರೊಡನೆ ಒಂದು ಸಂಜೆ- ಅಥವಾ ಶಾಪಿಂಗ್ ಅತ್ಯಂತ ಸಂತೋಷಕರ ಮತ್ತು ಅತ್ಯಾಕರ್ಷಕವಾಗಿರುತ್ತದೆ. ಡೇಟ್ ಕಾರ್ಯಕ್ರಮ ವಿಫಲವಾಗಬಹುದಾದ್ದರಿಂದ ನಿರಾಶೆಯಾಗಬಹುದು.

**ವೃಶ್ಚಿಕ** ಒಬ್ಬ ಸಂತನ ಆಶೀರ್ವಾದದಿಂದ ಮನಶ್ಶಾಂತಿ. ಬುದ್ಧಿವಂತ ಹೂಡಿಕೆಗಳು ಮಾತ್ರ ಆದಾಯಗಳನ್ನು ನೀಡುತ್ತವೆ- ಆದ್ದರಿಂದ ನೀವು ಕಷ್ಟಪಟ್ಟುಗಳಿಸಿದ ನಿಮ್ಮ ಹಣವನ್ನು ಎಲ್ಲಿ ಹೂಡಬಯಸುತ್ತೀರೆನ್ನುವಲ್ಲಿ ಖಚಿತತೆಯಿರಲಿ. ಸಂಬಂಧಗಳೊಂದಿಗಿನ ಸಂಬಂಧಗಳು ಹಾಗೂ ಬಂಧಗಳ ನವೀಕರಣದ ಒಂದು ದಿನ. ಇಂದು ನಿಮ್ಮ ಪ್ರೇಮಿಯನ್ನು ನಿರಾಸೆಗೊಳಿಸಬೇಡಿ. ನಿಮ್ಮನ್ನು ಪಶ್ಚಾತ್ತಾಪಗೊಳ್ಳುವಂತೆ ಮಾಡುತ್ತದೆ. ಟಿವಿ, ಮೊಬೈಲ್ ಬಳಕೆ ತಪ್ಪಿಲ್ಲ ಆದರೆ ಅಗತ್ಯಕ್ಕಿಂತ ಹೆಚ್ಚಾಗಿ ಬಳಸುವುದು ನಿಮ್ಮ ಅಗತ್ಯವಾದ ಸಮಯವನ್ನು ಹಾಳುಮಾಡಬಹುದು.

**ಧನು** ಆರೋಗ್ಯದ ಬಗ್ಗೆ ಸ್ವಲ್ಪ ಕಾಳಜಿ ವಹಿಸಬೇಕು. ಪ್ರಮುಖ ಜನರು ವಿಶೇಷ ವರ್ಗ ಹೊಂದಿರುವ ಯಾವುದಕ್ಕಾದರೂ ಹಣಕಾಸು ನೀಡಲು ಸಿದ್ಧವಾಗಿರುತ್ತಾರೆ. ನಿಮ್ಮ ಮಕ್ಕಳಿಂದ ನೀವು ಕೆಲವು ಪಾಠಗಳನ್ನು ಕಲಿಯಲಿದ್ದೀರಿ. ಅವರು ಅತ್ಯಂತ ಪರಿಶುದ್ಧ ಪ್ರಭೆಗಳನ್ನು ಹೊಂದಿರುತ್ತಾರೆ ಮತ್ತು ಅವರ ಮುಗ್ಧತೆ ಹಾಗೂ ಆನಂದದಿಂದ ಮತ್ತು ಮತ್ತು ನಕಾರಾತ್ಮಕ ಗುಣಗಳ ಅನುಪಸ್ಥಿತಿಯಿಂದ ಅವರ ಸುತ್ತಲಿರುವವರನ್ನು ಬದಲಾಯಿಸುವ ಶಕ್ತಿ ಹೊಂದಿರುತ್ತಾರೆ. ಇಂದು, ನೀವು ಮತ್ತು ನಿಮ್ಮ ಪ್ರೀತಿ ಸಂಗಾತಿ ಪ್ರೀತಿಯ ಸಾಗರದಲ್ಲಿ ತೇಲುತ್ತೀರಿ.

**ಮಕರ** ಗರ್ಭಿಣಿಯರಿಗೆ ವಿಶೇಷ ಕಾಳಜಿಯ ದಿನ. ಪ್ರಾಚೀನ ವಸ್ತುಗಳು ಮತ್ತು ಆಭರಣಗಳಲ್ಲಿ ಹೂಡಿಕೆ ಲಾಭ ಮತ್ತು ಸಮೃದ್ಧಿ ತರುತ್ತದೆ. ನೀವು ಸ್ನೇಹಿತರೊಂದಿಗೆ ಒಳ್ಳೆಯ ಸಮಯ ಹೊಂದಿದ್ದರೂ ವಾಹನ ಚಾಲನೆ ಮಾಡುವಾಗ ಹೆಚ್ಚುವರಿ ಆರೈಕೆಯನ್ನು ಹೊಂದಿಕೊಳ್ಳಿ. ಸಂಜೆಗೆ ಏನಾದರೂ ವಿಶೇಷವಾದದ್ದನ್ನು ಯೋಜಿಸಿ ಮತ್ತು ಅದನ್ನು ಸಾಧ್ಯವಾದಷ್ಟು ಪ್ರೇಮಮಯವಾಗಿಸಲು ಪ್ರಯತ್ನಿಸಿ. ಈ ರಾಶಿಚಕ್ರದ ಜನರು ಇಂದು ಜನರನ್ನು ಭೇಟಿಯಾಗುವುದಕ್ಕಿಂತ ಒಂಟಿಯಾಗಿ ಸಮಯವನ್ನು ಕಳೆಯಲು ಇಷ್ಟಪಡುತ್ತಾರೆ.

**ಕುಂಭ** ಹೆಚ್ಚು ಆಶಾವಾದಿಗಳಾಗಿರಲು ನಿಮ್ಮನ್ನು ನೀವೇ ಪ್ರೇರೇಪಿಸಿಕೊಳ್ಳಿ. ಇದು ವಿಶ್ವಾಸ ಮತ್ತು ನಮ್ಯತೆಯನ್ನು ಹೆಚ್ಚಿಸುತ್ತದಾದರೂ ಅದೇ ಸಮಯದಲ್ಲಿ ಭಯ, ದ್ವೇಷ, ಅಸೂಯೆ, ಸೇಡಿನಂಥ ನಕಾರಾತ್ಮಕ ಭಾವನೆಗಳನ್ನು ಹಿಂದೆ ಬಿಡಲು ಸಿದ್ಧವಾಗಿ. ಇಂದು ಯಾವುದೇ ಸಹಾಯವಿಲ್ಲದೆ, ನೀವು ಹಣವನ್ನು ಗಳಿಸುವಲ್ಲಿ ಸಾಮರ್ತ್ಯರಾಗಿರುತ್ತೀರಿ. ಒಂದು ಕುಟುಂಬದ ಒಟ್ಟಾಗುವಿಕೆಯಲ್ಲಿ ನೀವೇ ಕೇಂದ್ರಬಿಂದುವಾಗಿರುತ್ತೀರಿ. ಪ್ರೀತಿಯ ಸಂಕಟವನ್ನು ಎದುರಿಸುವ ಸಾಧ್ಯತೆಗಳು ಇಂದು ಹೆಚ್ಚಿವೆ.

**ಮೀನ** ನೀವು ಪರಿಸ್ಥಿತಿಯ ನಿಯಂತ್ರಣ ಹೊಂದುತ್ತಿದ್ದಂತೆ ನಿಮ್ಮ ಆತಂಕ ಕಣ್ಮರೆಯಾಗುತ್ತದೆ. ಇದು ಧೈರ್ಯದ ಮೊದಲ ಸ್ಪರ್ಶದಲ್ಲಿ ಕುಸಿದುಹೋಗುವ ಸಾಬೂನಿನ ಗುಳ್ಳೆಯಷ್ಟೇ ಗಟ್ಟಿಯೆಂದು ನೀವು ಅರ್ಥ ಮಾಡಿಕೊಳ್ಳುತ್ತೀರಿ. ಜೀವನದ ವಾಹನವನ್ನು ಚೆನ್ನಾಗಿ ಚಲಾಯಿಸಲು ಬಯಸುತ್ತಿದ್ದರೆ, ಇಂದು ನೀವು ಹಣದ ಬಗ್ಗೆ ವಿಶೇಷ ಗಮನ ಹರಿಸಬೇಕು. ನಿಮ್ಮ ಕುಟುಂಬ ಸದಸ್ಯರು ಹೇಳಿದ್ದೆಲ್ಲವಕ್ಕೂ ನೀವು ಒಪ್ಪದಿರಬಹುದು - ಆದರೆ ನೀವು ಅವರ ಅನುಭವದಿಂದ ಕಲಿಯಲು ಪ್ರಯತ್ನಿಸಬೇಕು. ನಿಮ್ಮ ಪ್ರೀತಿಪಾತ್ರರು ಸ್ವಲ್ಪ ಕಿರಿಕಿರಿಗೊಂಡಂತೆ ತೋರುತ್ತದೆ? ಇದು ನಿಮ್ಮ ಮನಸ್ಸಿನ ಮೇಲೆ ಒತ್ತಡವನ್ನು ಹಚ್ಚಿಸುತ್ತದೆ.

# ಸೀತೆಯ ಕೃತಜ್ಞತೆಯ ಹಸಿರು ಹಾರ

## ಒಂದು ಎಲೆ, ಅತಿಥಿ ಸತ್ಕಾರದ ಸಂಕೇತ. ಒಂದು ಬಳ್ಳಿ, ಭಾರತೀಯ ಸಂಸ್ಕೃತಿಯ ಸಾವಿರಾರು ವರ್ಷಗಳ ನೆನಪು!

(ಹೊಸನಾವಿಕ)

ಭಾರತೀಯ ಸಂಸ್ಕೃತಿಯಲ್ಲಿ ಕೆಲವು ಸಸ್ಯಗಳು ಕೇವಲ ಸಸ್ಯಗಳಾಗಿ ಉಳಿದಿಲ್ಲ, ಅವುಗಳೊಂದಿಗೆ ಪುರಾಣ, ಧಾರ್ಮಿಕ ಆಚರಣೆ, ಜನಪದ ನಂಬಿಕೆ ಮತ್ತು ಸಾಮಾಜಿಕ ಪರಂಪರೆಗಳು ಬೆಸೆದು ಕೊಂಡಿವೆ. ಅಂತಹ ಪವಿತ್ರ ಸಸ್ಯಗಳಲ್ಲಿ ವೀಳ್ಯದೆಲೆ ಪ್ರಮುಖವಾದುದು. ಸಂಸ್ಕೃತದಲ್ಲಿ ಇದನ್ನು ನಾಗವಲ್ಲಿ ಎಂದು ಕರೆಯಲಾಗುತ್ತದೆ. ಇದರ ವೈಜ್ಞಾನಿಕ ಹೆಸರು ಪೈಪರ್ ಬೆಟಲ್.

ಮನೆಗೆ ಬಂದ ಅತಿಥಿಗೆ ತಾಂಬೂಲ ನೀಡುವುದರಿಂದ ಹಿಡಿದು ದೇವರ ಪೂಜೆಯವರೆಗೆ ವೀಳ್ಯದೆಲೆಗೆ ವಿಶೇಷ ಸ್ಥಾನವಿದೆ. ನಾಗವಳ್ಳಿ ಎಂಬ ಹೆಸರಿನಲ್ಲೇ ನಾಗಲೋಕದ ಪುರಾಣದ ಪ್ರತಿಧ್ವನಿ ಕೇಳಿಸುತ್ತದೆ.

ವೀಳ್ಯದೆಲೆಯ ಮೂಲದ ಕುರಿತು ಭಾರತೀಯ ಪುರಾಣ ಪರಂಪರೆಯಲ್ಲಿ ಹಲವು ಕಥೆಗಳು ಪ್ರಚಲಿತದಲ್ಲಿವೆ. ಅವುಗಳಲ್ಲಿ ಮಹಾಭಾರತಕ್ಕೆ ಸಂಬಂಧಿಸಿದ ನಾಗಲೋಕದ ಕಥೆ ಅತ್ಯಂತ ಕುತೂಹಲಕಾರಿಯಾಗಿದೆ.

ಪಾಂಡವರು ನೆರವೇರಿಸಿದ ರಾಜಸೂಯ ಯಾಗದ ಸಂದರ್ಭದಲ್ಲಿ ಪವಿತ್ರ ವಿಧಿವಿಧಾನಗಳಿಗೆ ವೀಳ್ಯದೆಲೆ ಅಗತ್ಯವಾಯಿತು ಎಂಬ ಜನಪ್ರಚಲಿತ ಕಥೆಯಿದೆ. ಆದರೆ ಆ ಸಮಯದಲ್ಲಿ ಭೂಮಿಯಲ್ಲಿ ವೀಳ್ಯದೆಲೆ ದೊರೆಯಲಿಲ್ಲ, ಹೀಗಾಗಿ ಅದನ್ನು ಪಡೆಯಲು ಅರ್ಜುನನು ನಾಗಲೋಕಕ್ಕೆ ಪ್ರಯಾಣಿಸಿದನೆಂದು ದಂತಕಥೆ ಹೇಳುತ್ತದೆ.

ನಾಗಲೋಕವನ್ನು ತಲುಪಿದ ಅರ್ಜುನನಿಗೆ ನಾಗರಾಣಿಯು ವೀಳ್ಯದೆಲೆಯ ಬಳ್ಳಿಯನ್ನು ನೀಡಿದಳು ಎನ್ನಲಾಗುತ್ತದೆ. ನಾಗರ ಲೋಕದಿಂದ



ಬಂದ ಈ ಬಳ್ಳಿಗೆ ನಾಗವಲ್ಲಿ ಎಂಬ ಹೆಸರು ಬಂದಿತು ಎಂಬುದು ಜನಪದ ನಂಬಿಕೆ. ನಾಗ ಎಂದರೆ ಸರ್ಪ ಮತ್ತು ವಲ್ಲಿ ಎಂದರೆ ಬಳ್ಳಿ. ಹೀಗಾಗಿ ನಾಗವಲ್ಲಿ ಎಂದರೆ ನಾಗರ ಬಳ್ಳಿ ಎಂಬ ಅರ್ಥವೂ ದೊರೆಯುತ್ತದೆ. ಇದೇ ಕಾರಣದಿಂದ ಕೆಲವು ಪ್ರದೇಶಗಳಲ್ಲಿ ವೀಳ್ಯದೆಲೆಯನ್ನು ನಾಗರಬೆಳ್ಳಿ ಎಂದೂ ಕರೆಯುತ್ತಾರೆ.

ವೀಳ್ಯದೆಲೆಗೆ ಸಂಬಂಧಿಸಿದ ಮತ್ತೊಂದು ಸುಂದರವಾದ ಜನಪ್ರಚಲಿತ ಕಥೆ ರಾಮಾಯಣದೊಂದಿಗೆ ಬೆಸೆದುಕೊಂಡಿದೆ. ಶ್ರೀರಾಮನ ಸಂದೇಶವನ್ನು ಹೊತ್ತು ಹನುಮಂತನು ಲಂಕೆಗೆ ತೆರಳಿ ಸೀತೆಯನ್ನು ಭೇಟಿಯಾದಾಗ, ರಾಮನು ಕ್ಷೇಮವಾಗಿರುವ ಸುದ್ದಿ ತಿಳಿದು ಸೀತೆಯ ಮನಸ್ಸು ಸಂತೋಷದಿಂದ ತುಂಬಿತು ಎಂಬುದು ರಾಮಾಯಣದ ಪ್ರಸಿದ್ಧ ಪ್ರಸಂಗ. ಈ ಸಂದರ್ಭಕ್ಕೆ ಸಂಬಂಧಿಸಿದ ಜನಪದ ಕಥೆಯೊಂದರ ಪ್ರಕಾರ, ಸೀತೆಗೆ ಹನುಮಂತನಿಗೆ ಕೃತಜ್ಞತೆ ಸಲ್ಲಿಸಲು ಹೂವುಗಳು ಸಿಗಲಿಲ್ಲ, ಆಗ ಹತ್ತಿರದಲ್ಲಿದ್ದ ಹಸಿರು ವೀಳ್ಯದೆಲೆಗಳನ್ನು ತೆಗೆದುಕೊಂಡು ಹನುಮಂತನಿಗೆ ಅರ್ಪಿಸಿದಳು ಎನ್ನಲಾಗುತ್ತದೆ.

ಹೂವಿಲ್ಲದ ಕ್ಷಣದಲ್ಲಿ ಹಸಿರು ಎಲೆಯೇ ಪ್ರೀತಿಯ ಹಾರವಾಯಿತು. ಈ ನಂಬಿಕೆಯ ಹಿನ್ನೆಲೆಯಲ್ಲಿ ಕೆಲವು ಸಂಪ್ರದಾಯಗಳಲ್ಲಿ ಹನುಮಂತನಿಗೆ ವೀಳ್ಯದೆಲೆಗಳ ಮಾಲೆಯನ್ನು ಅರ್ಪಿಸುವುದನ್ನು ಶುಭಕರವೆಂದು ಪರಿಗಣಿಸಲಾಗುತ್ತದೆ. ವಿಶೇಷವಾಗಿ ಹನುಮ ಜಯಂತಿ ಸೇರಿದಂತೆ ಕೆಲವು ಆಚರಣೆಗಳಲ್ಲಿ ವೀಳ್ಯದೆಲೆಯ ಅಲಂಕಾರ ಮತ್ತು ಅರ್ಪಣೆಗೆ ಮಹತ್ವವಿದೆ.

ವೀಳ್ಯದೆಲೆ ಭಾರತೀಯ ಧಾರ್ಮಿಕ ಆಚರಣೆಗಳಲ್ಲಿ ಮಹತ್ವದ ಸ್ಥಾನ ಪಡೆದಿದೆ. ಗಣಪತಿ ಪೂಜೆ, ದೇವರ ಆರಾಧನೆ, ಮದುವೆ, ನಾಮಕರಣ, ಗೃಹಪ್ರವೇಶ, ವ್ರತಾಚರಣೆ ಸೇರಿದಂತೆ ಅನೇಕ ಶುಭಕಾರ್ಯಗಳಲ್ಲಿ ವೀಳ್ಯದೆಲೆ ಮತ್ತು ಅಡಿಕೆಯನ್ನು ತಾಂಬೂಲವಾಗಿ ಬಳಸಲಾಗುತ್ತದೆ.

ತಾಂಬೂಲವೆಂದರೆ ಕೇವಲ ಎಲೆ-ಅಡಿಕೆ ಅಲ್ಲ, ಅದು ಗೌರವ, ಆತ್ಮೀಯತೆ ಮತ್ತು ಶುಭಾಶಯಗಳ ಸಂಕೇತವಾಗಿದೆ. ಭಾರತೀಯ ಮನೆಗಳಲ್ಲಿ ಅತಿಥಿಯನ್ನು ಸತ್ಕರಿಸುವ ಸಂಪ್ರದಾಯದಲ್ಲಿಯೂ ತಾಂಬೂಲಕ್ಕೆ ವಿಶೇಷ ಸ್ಥಾನವಿದೆ. ಊಟದ ನಂತರ ತಾಂಬೂಲ ನೀಡುವುದು ಹಿಂದಿನ ಕಾಲದಿಂದಲೂ ಗೌರವದ ಸಂಕೇತವಾಗಿ ಕಂಡುಬಂದಿದೆ. ಮದುವೆ ಮಾತುಕತೆ, ಶುಭ ಸಮಾರಂಭಗಳು ಹಾಗೂ ಧಾರ್ಮಿಕ ಕಾರ್ಯಕ್ರಮಗಳಲ್ಲಿ ತಾಂಬೂಲ ವಿನಿಮಯವು ಸಂಬಂಧಗಳ ಬೆಸುಗೆಗೂ ಸಂಕೇತವಾಗಿದೆ.

ವೀಳ್ಯದೆಲೆ ಒಂದು ಸದಾಹರಿದ್ವರ್ಣದ ಹತ್ತುವ ಬಳ್ಳಿಯಾಗಿದ್ದು, ಬೆಚ್ಚಗಿನ ಮತ್ತು ತೇವಾಂಶವುಳ್ಳ ವಾತಾವರಣದಲ್ಲಿ ಉತ್ತಮವಾಗಿ ಬೆಳೆಯುತ್ತದೆ. ಇದರ ಎಲೆಗಳು ಹೃದಯಾಕಾರದ ವಿನ್ಯಾಸ ಹೊಂದಿದ್ದು, ವಿಶಿಷ್ಟ ಪರಿಮಳ ಮತ್ತು ರುಚಿಯನ್ನು ಹೊಂದಿರುತ್ತವೆ.

ಭಾರತದಲ್ಲಿ ವಿವಿಧ ಪ್ರದೇಶಗಳಲ್ಲಿ ವೀಳ್ಯದೆಲೆಯ ಹಲವು ಸ್ಥಳೀಯ ತಳಿಗಳು ಕಂಡುಬರುತ್ತವೆ. ಕರ್ನಾಟಕ ಸೇರಿದಂತೆ ದಕ್ಷಿಣ ಭಾರತದ ಹಲವು ಭಾಗಗಳಲ್ಲಿ ಇದನ್ನು ಸಾಂಪ್ರದಾಯಿಕವಾಗಿ ಬೆಳೆಸಲಾಗುತ್ತದೆ.

ವೀಳ್ಯದೆಲೆ ಕೇವಲ ಧಾರ್ಮಿಕ ಬಳಕೆಗೆ ಸೀಮಿತವಾಗಿಲ್ಲ, ಸಾಂಪ್ರದಾಯಿಕವಾಗಿ ಇದನ್ನು ತಾಂಬೂಲದ ಭಾಗವಾಗಿ ಬಳಸಲಾಗುತ್ತಿದ್ದು, ಭಾರತೀಯ ಆಹಾರ ಸಂಸ್ಕೃತಿಯಲ್ಲಿಯೂ ತನ್ನದೇ ಆದ ಸ್ಥಾನವನ್ನು ಪಡೆದಿದೆ.

ನಾಗವಳ್ಳಿಯ ಕಥೆಗಳು ನಮಗೆ ಒಂದು ಸಸ್ಯದ ಬಗ್ಗೆ ಮಾತ್ರ ಹೇಳುವುದಿಲ್ಲ, ಅವು ಭಾರತೀಯ ಸಂಸ್ಕೃತಿಯಲ್ಲಿ ಪ್ರಕೃತಿಗೆ ನೀಡಲಾಗಿರುವ ಗೌರವವನ್ನೂ ಪರಿಚಯಿಸುತ್ತವೆ. ಒಂದು ಸಣ್ಣ ಹಸಿರು ಎಲೆಯ ಹಿಂದೆ ನಾಗಲೋಕದ ಕಥೆ, ಅರ್ಜುನನ ಸಾಹಸ, ಸೀತೆಯ ಕೃತಜ್ಞತೆ, ಹನುಮಂತನ ಭಕ್ತಿ ಮತ್ತು ಭಾರತೀಯ ತಾಂಬೂಲ ಸಂಪ್ರದಾಯದ ನೆನಪುಗಳು ಅಡಗಿವೆ.

ಮಣ್ಣಿನಲ್ಲಿ ಬೆಳೆದ ಬಳ್ಳಿ, ಪುರಾಣಗಳಲ್ಲಿ ಬೆಳೆದ ಕಥೆ. ಸಂಸ್ಕೃತಿಯಲ್ಲಿ ಉಳಿದ ಪರಂಪರೆ, ಅದೇ ನಾಗವಳ್ಳಿ. ಇಂದಿನ ಆಧುನಿಕ ಜೀವನಶೈಲಿಯಲ್ಲಿಯೂ ಮದುವೆ-ಮುಂಜಿ, ಪೂಜೆ-ಪುನಸ್ಕಾರ, ಹಬ್ಬ-ಹರಿದಿನಗಳಲ್ಲಿ ವೀಳ್ಯದೆಲೆ ತನ್ನ ಸ್ಥಾನವನ್ನು ಕಳೆದುಕೊಂಡಿಲ್ಲ. ಪೀಳಿಗೆಯಿಂದ ಪೀಳಿಗೆಗೆ ಸಾಗುತ್ತಿರುವ ಈ ಹಸಿರು ಪರಂಪರೆ ನಮ್ಮ ಸಂಸ್ಕೃತಿಯ ಜೀವಂತ ನೆನಪಾಗಿದೆ.

ಹೀಗಾಗಿ ನಾಗವಳ್ಳಿ ಕೇವಲ ಪೈಪರ್ ಬೆಟಲ್ ಎಂಬ ಸಸ್ಯವಲ್ಲ, ಅದು ಭಾರತೀಯ ನಂಬಿಕೆ, ಆತಿಥ್ಯ, ಭಕ್ತಿ, ಪುರಾಣ ಮತ್ತು ಪ್ರಕೃತಿ ಆರಾಧನೆಯ ಹಸಿರು ಸಂಕೇತ. ಕೈಯಲ್ಲಿ ಒಂದು ವೀಳ್ಯದೆಲೆ ಇದ್ದರೆ ಅದು ತಾಂಬೂಲವಾಗಬಹುದು. ಆದರೆ ಅದರ ಹಿಂದೆ ಸಾವಿರಾರು ವರ್ಷಗಳ ಸಂಸ್ಕೃತಿಯ ಕಥೆಯೇ ಅಡಗಿದೆ.



ಲೇಖನ : ಸನ್ನಿಧಿ. ವಿ.
ಸಿರಸಿ.

## ಆರು ವರ್ಷಗಳ ಹಿಂದೆ ನಡೆದ ಭೀಕರ ಮಹಾಮಾರಿ ಕೋವಿಡ್ : ಒಂದು ನೆನಪು

(ಹೊಸನಾವಿಕ)

2020ರ ಸೆ.11ನೇ ಶುಕ್ರವಾರ ಅದು ಮಹಾಮಾರಿ ಕೊರೋನಾ ಎಂಬ ವೈರಸ್ಸು ಉತ್ತುಂಗದಲ್ಲಿದ್ದ ಸಮಯ. ನನ್ನ ಅಮ್ಮ ಗೌರಿ ಹಬ್ಬವನ್ನು ವಿಜೃಂಭಣೆಯಿಂದ ಮನೆಯಲ್ಲಿ ಆಚರಿಸಿದ್ದರು. ಸಂಜೆ ಅನಿರೀಕ್ಷಿತ ವಾಗಿ ಅಮ್ಮನಿಗೆ ತುಂಬಾ ಉಸಿರಾಟದ ಸಮಸ್ಯೆ ಎದುರಾಯಿತು. ರಾತ್ರಿ 10 ಗಂಟೆಯವರೆಗೆ ನಾವು ಶಿವಮೊಗ್ಗದಲ್ಲಿ ಹುಡುಕಾಡದ ಆಸ್ಪತ್ರೆಗಳಿಲ್ಲ, ಯಾವ ಆಸ್ಪತ್ರೆಗಳಲ್ಲೂ ಆಕ್ಸಿಜನ್ ಬೆಡ್ ಇಲ್ಲ, ನಂತರ ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಗೆ ದಾಖಲು ಮಾಡಿದೆ. ಸ್ವಲ್ಪ ಪರವಾಗಿಲ್ಲ ಅನ್ನಿಸಿತು. ಅವರ ಜೊತೆ ಯಾರೂ ಇರುವ ಹಾಗಿರಲಿಲ್ಲ, ಅವರನ್ನು ಕೋವಿಡ್ ಕೇರ್ ಸೆಂಟರ್‌ಗೆ ದಾಖಲಿಸಲಾಯಿತು. ಹೀಗೆ ನಾಲ್ಕು ದಿನ ಕಳೆಯಿತು. ಐದನೇ ದಿನ ಮಧ್ಯಾಹ್ನ ನಾನು ಊಟ ಮಾಡುತ್ತಿದ್ದ ಸಂದರ್ಭದಲ್ಲಿ ಮೆಗ್ಗಾನ್ ಆಸ್ಪತ್ರೆಯಿಂದ ಫೋನ್ ಬಂತು. ನಿಮ್ಮ ತಾಯಿಯವರು ತುಂಬಾ ಉಸಿರಾಟದ ಸಮಸ್ಯೆ ಯಿಂದ ಬಳಲುತ್ತಿದ್ದಾರೆ. ಪರಿಸ್ಥಿತಿ ತುಂಬಾ ಗಂಭೀರವಾಗಿದೆ. ಉಳಿಯುವ ಸಾಧ್ಯತೆ ಕಡಿಮೆ ಇದೆ. ತಕ್ಷಣ ಆಸ್ಪತ್ರೆಗೆ ಬನ್ನಿ ಎಂದು ಫೋನಿಟ್ಟರು.

ತಕ್ಷಣ ಮೆಗ್ಗಾನ್ ಆಸ್ಪತ್ರೆಗೆ ಓಡಿದೆ. ಒಳಗೆ ಹೋಗಿ ನನ್ನ ಅಮ್ಮನನ್ನು ನೋಡಿ ದಂಗಾಗಿ ಹೋದೆ. ನನ್ನನ್ನು ನೋಡಿ ಒಂದು ಲೋಟ ನೀರು ಕೊಡು ಅಂದ್ರು. ಕೊಟ್ಟೆ, ತಕ್ಷಣ ಕುಡಿದಿದ್ದ ನೀರು ನೆತ್ತಿಗೆ ಏರಿ ಉಸಿರು ಮೇಲೆ ಕೆಳಗೆ ಆಯಿತು. ನಾನು ಅಮ್ಮನನ್ನು ಹಾಸಿಗೆ ಮೇಲೆ ಉಲ್ಟಾ ಮಲಗಿಸಿ ಬೆನ್ನಿಗೆ ಶಕ್ತಿ ಮೀರಿ ಗುದ್ದಿದೆ. ಉಸಿರಾಟ ಪ್ರಾರಂಭವಾಯಿತು.

ಅಲ್ಲಿದ್ದ ಡಾಕ್ಟ್ರು, ನರ್ಸ್‌ಗಳಿಗೆ ಬೈದು ಐಸಿಯುನಲ್ಲಿ ಅಮ್ಮನನ್ನು ದಾಖಲು ಮಾಡಿದೆ. ಭರ್ತಿ ಎರಡು ತಿಂಗಳು ನನ್ನ ಅಮ್ಮನನ್ನು ನಾನು ಕಾಪಾಡಿಕೊಂಡೆ. ಆ ಎರಡು ತಿಂಗಳುಗಳನ್ನು ಕಳೆಯುವುದು ಸುಲಭವಾದ ಮಾತಾಗಿರಲಿಲ್ಲ, ಆಸ್ಪತ್ರೆಗೆ ಬೆಳಿಗ್ಗೆ ದಾಖಲಾದವರು ಸಂಜೆಗೆ ಜೀವಂತ ಇರುತ್ತಿರಲಿಲ್ಲ, ಅಷ್ಟು ವೇಗವಾಗಿ ವೈರಸ್ಸು ಹರಡುತ್ತಿತ್ತು. ನಾನು ಆಗ 2 ತಿಂಗಳುಗಳಲ್ಲಿ ಸುಮಾರು 300ಕ್ಕೂ ಹೆಚ್ಚು ಸಾವುಗಳನ್ನು ಕಣ್ಣಾರೆ ನೋಡಿದ್ದೇನೆ. ನಿಜಕ್ಕೂ ಕಷ್ಟಕರ ವಾದ ದಿನಗಳವು. ಅನ್ನ, ನೀರು, ನಿದ್ದೆ ಇಲ್ಲದೇ ನನ್ನ ಅಮ್ಮನನ್ನು ಕಾಪಾಡಿಕೊಂಡು ಬಂದೆ. ಅವೆಲ್ಲ ಆಗಿ 6 ವರ್ಷಗಳಾದವು.

ಎಲ್ಲರೂ ಗೌರಿ-ಗಣೇಶನ ಹಬ್ಬದ ಆಚರಣೆಯಲ್ಲಿ ಇದ್ದಾರೆ. ನನ್ನ ಮನಸು ಆರು ವರ್ಷಗಳ ಹಿಂದೆ ಓಡಿದೆ. ಇಂದು ನೆನಪಾ ಯಿತು. ಈಗ ಅಮ್ಮ ಚೆನ್ನಾಗಿದ್ದಾರೆ.

ಲವ್ ಯೂ ಅಮ್ಮ. ನೀನು ನೂರ್ಕಾಲ ಇರಬೇಕು..

- ಮುರುಳೀಧರ್ ಹೆಚ್ ಸಿ,
ಪತ್ರಕರ್ತರು, ಶಿವಮೊಗ್ಗ

## ಕಸ್ತೂರಿರಂಗನ್ ವರದಿ ರೈತರ ಪಾಲಿಗೆ ಮರಣಶಾಸನ

(ಮೂರನೇ ಪುಟದಿಂದ)

ಇಲ್ಲಿ ಕೃಷಿಯನ್ನೇ ಅವಲಂಬಿಸಿ ಜನರು ಜೀವನ ನಡೆಸುತ್ತಿದ್ದಾರೆ ಎಂದು ಅವರು ತಿಳಿಸಿದರು.

ರೈತ ಸಂಘದ ಗೌರವಾಧ್ಯಕ್ಷ ಈರಣ್ಣ ಪ್ಯಾಟಿ ಮಾತನಾಡಿ, ಅಭಿವೃದ್ಧಿ ಹೊಂದಿರುವ ಕೃಷಿ ಪ್ರದೇಶಗಳನ್ನು ಪರಿಸರ ಸೂಕ್ಷ್ಮ ವಲಯಕ್ಕೆ ಸೇರಿಸುವುದರಿಂದ ರೈತರು ಭೂಹಕ್ಕು ಕಳೆದುಕೊಳ್ಳುವ ಆತಂಕವಿದೆ. ಹಲವು ಗ್ರಾಮಸಭೆಗಳಲ್ಲಿ ವರದಿಯನ್ನು ವಿರೋಧಿಸಲಾಗಿದೆ. ರೈತರ ಆಕ್ಷೇಪಣೆ ಪರಿಗಣಿಸದೆ ಅಧಿಸೂಚನೆ ಜಾರಿಗೊಳಿಸಿದರೆ ಮುಂಬರುವ ಚುನಾವಣೆಯಲ್ಲಿ ತಕ್ಕ ಉತ್ತರ ನೀಡಲಾಗುವುದು ಎಂದು ಎಚ್ಚರಿಸಿದರು.

ನಂತರ ರೈತರು ಪಾದಯಾತ್ರೆ ನಡೆಸಿ ಕೇಂದ್ರ ಸರ್ಕಾರದ ವಿರುದ್ಧ ಘೋಷಣೆ ಕೂಗಿದರು. ತಹಶೀಲ್ದಾರ್ ಮೂಲಕ ಕೇಂದ್ರ ಸರ್ಕಾರಕ್ಕೆ ಆಕ್ಷೇಪಣಾ ಮನವಿ ಸಲ್ಲಿಸಿದರು. ಹಲವು ರೈತ ಮುಖಂಡರು ಹಾಗೂ ಸಾರ್ವಜನಿಕರು ಭಾಗವಹಿಸಿದ್ದರು.

## ಸುರೇಶ್ ಬಾಬು ನಿಧನ - ಸಂತಾಪ

(ಹೊಸನಾವಿಕ)

ಶಿವಮೊಗ್ಗ, ಸೆ.11: ನಗರದ ಸ್ನೇಹಮಹಿ ಸಂಘದ ನಿರ್ದೇಶಕರಾಗಿದ್ದ ಗಾಡಿಕೊಪ್ಪ ವಾಸಿ ಸುರೇಶ್‌ಬಾಬು (65) (ಪೇಪರ್ ಸೂರಿ) ನಿಧನರಾದರು.

ಮೃತರು ಪತ್ನಿ, ಈರ್ವ ಪುತ್ರಿಯರು, ಓರ್ವ ಪುತ್ರ ಸೇರಿದಂತೆ ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ.

ಇವರ ನಿಧನಕ್ಕೆ ಸ್ನೇಹಮಹಿ ಸಂಘದ ಅಧ್ಯಕ್ಷರು ಹಾಗೂ ಪದಾಧಿ



ಕಾರಿಗಳು ಸೇರಿದಂತೆ ಹಲವರು ತೀವ್ರ ಸಂತಾಪ ಸೂಚಿಸಿದ್ದಾರೆ.

## ಶಿವಮೊಗ್ಗದಲ್ಲಿ ಮೊಳಗಿದ ಸೌಹಾರ್ದದ ಹೆಜ್ಜೆಗಳು

(ಕೊನೆಯ ಪುಟದಿಂದ)

ಮತ್ತು ಕುವೆಂಪು ಶತಮಾನೋತ್ಸವ ಬಿ.ಎಡ್. ಕಾಲೇಜಿನ ವಿದ್ಯಾರ್ಥಿ ಗಳು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು.

ಶಾಂತಿನಡಿಗೆ ಸಂಚಾಲಕರಾದ ಹಿರಿಯ ವಕೀಲ ಕೆ.ಪಿ. ಶ್ರೀಪಾಲ್ ಮಾತನಾಡಿ, ಪ್ರತಿವರ್ಷದಂತೆ ಈ ವರ್ಷವೂ ಶಾಂತಿನಡಿಗೆಯ ಸೌಹಾರ್ದ ಹಬ್ಬವನ್ನು ಆಯೋಜಿಸಲಾಗಿದ್ದು, ಈ ಬಾರಿ ಜೆನ್-ಜಿ ಕಣ್ಣಲ್ಲಿ ಬ್ರ್ಯಾಂಡ್ ಶಿವಮೊಗ್ಗ ಎಂಬ ಪರಿಕಲ್ಪನೆಯೊಂದಿಗೆ ವಿಶೇಷವಾಗಿ ಆಚರಿಸಲಾಗಿದೆ ಎಂದರು.

ಕಲಾ ತಂಡಗಳು, ವಿದ್ಯಾರ್ಥಿಗಳು ಹಾಗೂ ಶಾಂತಿ ಬಯಸುವ ಸಾವಿರಾರು ಮನಸ್ಸುಗಳು ಒಂದಾಗಿ ಅಂಬೇಡ್ಕರ್ ಭವನದಿಂದ ನಗರದ ಪ್ರಮುಖ ಬೀದಿಗಳಲ್ಲಿ ಸಾಗುವ ಮೂಲಕ ರಾಮಣ್ಣ ಶೆಟ್ಟಿ ಪಾರ್ಕ್ ತಲುಪಿ ಕಾರ್ಯಕ್ರಮದಲ್ಲಿ ಭಾಗವಹಿಸಿದರು. ಶಿವಮೊಗ್ಗದಲ್ಲಿ ಬಹಳ ದಿನಗಳ ಬಳಿಕ ಎರಡು ಸಾವಿರಕ್ಕೂ ಅಧಿಕ ಮಂದಿ ಒಂದೆಡೆ ಸೇರಿ ಬೃಹತ್ ಮೆರವಣಿಗೆಯಲ್ಲಿ ಪಾಲ್ಗೊಂಡಿರುವುದು ಈ ಬಾರಿಯ ಶಾಂತಿನಡಿಗೆಯ ವಿಶೇಷವಾಗಿದೆ.

ಕಾರ್ಯಕ್ರಮಕ್ಕೆ ಸಹಕರಿಸಿದ ಎಲ್ಲರಿಗೂ ಅವರು ಕೃತಜ್ಞತೆ ಸಲ್ಲಿಸಿದರು.

ರಾಜ್ಯ ರೈತ ಸಂಘದ ಅಧ್ಯಕ್ಷ ಎಚ್.ಆರ್. ಬಸವರಾಜಪ್ಪ, ಕೆ.ಎಲ್. ಅಶೋಕ್, ದಲಿತ ಸಂಘರ್ಷ ಸಮಿತಿ ಸಂಚಾಲಕ ಎಂ. ಗುರುಮೂರ್ತಿ, ಬಸವಕೇಂದ್ರದ ಬಸವ ಮರುಳಸಿದ್ದ ಸ್ವಾಮೀಜಿ ಸೇರಿದಂತೆ ವಿವಿಧ ಸಮುದಾಯಗಳ ಧರ್ಮಗುರುಗಳು, ಮುಖಂಡರು ಹಾಗೂ ಗಣ್ಯರು ಪಾಲ್ಗೊಂಡು ಸೌಹಾರ್ದತೆಗೆ ಸಾಕ್ಷಿಯಾದರು.

## ಪ್ಲಾಸ್ಟಿಕ್ ಬಾಟಲಿ ತ್ಯಜಿಸಿ, ಸ್ಟೀಲ್ ಬಾಟಲಿ ಬಳಸಿ: ಪರಿಸರ ನಾಗರಾಜ್



(ಹೊಸನಾವಿಕ)

ಶಿವಮೊಗ್ಗ, ಸೆ. 11: ಪರಿಸರ ಸಂರಕ್ಷಣೆ ಹಾಗೂ ಪ್ಲಾಸ್ಟಿಕ್ ಮುಕ್ತ ಸಮಾಜ ನಿರ್ಮಾಣದ ಸಂದೇಶವನ್ನು ಜನರಿಗೆ ತಲುಪಿಸುವ ಉದ್ದೇಶದಿಂದ ಜೆಸಿಐ ಶಿವಮೊಗ್ಗ ವಿವೇಕ್ ಸಂಸ್ಥೆ ಆಯೋಜಿಸಿರುವ ವಾರ್ಷಿಕ ಜೆಸಿಐ ವೀಕ್ ಸಪ್ತಾಹದ ಮೊದಲ ದಿನ ಸಸ್ಟೈನೇಬಲ್ ಸಿಪ್ಪಿಂಗ್ ಡೇ ಕಾರ್ಯಕ್ರಮ ನಗರದ ಶುಭಂ ಹೋಟೆಲ್ ಮುಂಭಾಗ ನಡೆಯಿತು.

ಕಾರ್ಯಕ್ರಮದ ಅಂಗವಾಗಿ ನಗರದ ಆಟೋ ಚಾಲಕರಿಗೆ ಪರಿಸರ ಸ್ನೇಹಿ ಹಾಗೂ ಮರುಬಳಕೆ ಮಾಡಬಹುದಾದ ಸ್ಟೀಲ್ ಬಾಟಲಿಗಳನ್ನು ಉಚಿತವಾಗಿ ವಿತರಿಸಿ, ಏಕಬಳಕೆಯ ಪ್ಲಾಸ್ಟಿಕ್ ಬಾಟಲಿಗಳ ಬಳಕೆ ಕಡಿಮೆ ಮಾಡುವ ಕುರಿತು ಜಾಗೃತಿ ಮೂಡಿಸಲಾಯಿತು. ಜೆಸಿಐ ಸದಸ್ಯರು ಪ್ಲಾಸ್ಟಿಕ್ ಬಳಕೆಯಿಂದ ಪರಿಸರ ಹಾಗೂ ಮಾನವ ಆರೋಗ್ಯದ ಮೇಲಾಗುವ ದುಷ್ಪರಿಣಾಮಗಳ ಕುರಿತು ಸಾರ್ವಜನಿಕರಿಗೆ ಮಾಹಿತಿ ನೀಡಿದರು.

ಜೆಸಿಐ ವೀಕ್ ಸಂಯೋಜಕ ಜಗದೀಶ್ ಜಿ.ಎಸ್. ಮಾತನಾಡಿ, ಪ್ಲಾಸ್ಟಿಕ್ ನಿರ್ಮೂಲನೆ ಕುರಿತು ಸಮಾಜದಲ್ಲಿ ಅರಿವು ಮೂಡಿಸುವುದು ಇಂದಿನ ಅಗತ್ಯವಾಗಿದೆ. ಪ್ಲಾಸ್ಟಿಕ್ ತ್ಯಾಜ್ಯ ಹಾಗೂ ಅದನ್ನು ಸುಡುವುದರಿಂದ ಪರಿಸರ ಮಾಲಿನ್ಯ ಉಂಟಾಗುತ್ತದೆ. ಪ್ರತಿಯೊಬ್ಬರೂ ಪ್ಲಾಸ್ಟಿಕ್ ಬಳಕೆ ತಗ್ಗಿಸಿ, ಗಾಜು ಮತ್ತು ಸ್ಟೀಲ್ ಉತ್ಪನ್ನಗಳ ಬಳಕೆಗೆ ಆದ್ಯತೆ ನೀಡಬೇಕು ಎಂದರು.

ಸಹ್ಯಾದ್ರಿ ಕಾಲೇಜಿನ ಪ್ರಾಧ್ಯಾಪಕ ಪರಿಸರ ನಾಗರಾಜ್ ಮಾತನಾಡಿ, ನೀರಿನ ಕಲುಷಿತತೆಗೆ ಪ್ಲಾಸ್ಟಿಕ್ ಪ್ರಮುಖ ಕಾರಣವಾಗಿದೆ. ಬಿಸಿಲಿನಲ್ಲಿ ಪ್ಲಾಸ್ಟಿಕ್ ಬಾಟಲಿಗಳಲ್ಲಿ ನೀರು ಸಂಗ್ರಹಿಸುವುದು ಆರೋಗ್ಯಕ್ಕೆ ಹಾನಿಕಾರಕವಾಗುವ ಸಾಧ್ಯತೆಯಿದೆ. ಪ್ಲಾಸ್ಟಿಕ್ ಬಾಟಲಿ ಬಿಡಿ, ಸ್ಟೀಲ್ ಬಾಟಲಿ ಹಿಡಿ ಎಂಬ ಸಂದೇಶವನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಹೇಳಿದರು.

ಕಾಂಗ್ರೆಸ್ ಮುಖಂಡ ಹಾಗೂ ಕೋಟೆ ಶ್ರೀ ಸೀತಾರಾಮಾಂಜನೇಯ ಸ್ವಾಮಿ ದೇವಸ್ಥಾನ ಸಮಿತಿ ಅಧ್ಯಕ್ಷ ದೇವೇಂದ್ರಪ್ಪ ಮಾತನಾಡಿ, ಜೆಸಿಐ ಶಿವಮೊಗ್ಗ ವಿವೇಕ್ ಸಂಸ್ಥೆಯ ಸಮಾಜಮುಖಿ ಕಾರ್ಯಗಳನ್ನು ಶ್ಲಾಘಿಸಿದರು.

ಸಂಸ್ಥೆಯ 2026ನೇ ಸಾಲಿನ ಅಧ್ಯಕ್ಷೆ ವಿಜಯಲಕ್ಷ್ಮಿ ಉದಯ ಕಡಂಬ ಅಧ್ಯಕ್ಷತೆ ವಹಿಸಿದ್ದರು. ಪೂರ್ವಾಧ್ಯಕ್ಷ ಜೆಸಿ ಚಂದ್ರಹಾಸ್ ಸ್ವಾಗತಿಸಿದರು. ಡಿ. ಗೋವಿಂದಪ್ಪ, ಸೂರಪ್ಪ, ರವಿ, ಜೆಸಿ ವಾಣಿ ಜಗದೀಶ್, ಕಾರ್ಯದರ್ಶಿ ಶ್ವೇತಾ ಸಚಿನ್, ಜಗದೀಶ್ ಬಿ.ಎನ್., ಶ್ಯಾಮಲಾ ಸೇರಿದಂತೆ ಗಣ್ಯರು ಹಾಗೂ ಜೆಸಿಐ ಸದಸ್ಯರು ಉಪಸ್ಥಿತರಿದ್ದರು.

# ಹಿಂದೂ ಸಂಘಟನಾ ಮಹಾಮಂಡಳಿಗೆ ನೂತನ ಪದಾಧಿಕಾರಿಗಳ ಆಯ್ಕೆ

## ಅಧ್ಯಕ್ಷರಾಗಿ ಸರಾಫ್ ಶ್ರೀಧರ್ ರಾವ್ | ಕಾರ್ಯದರ್ಶಿಯಾಗಿ ಎ.ಎನ್. ಸತ್ಯನಾರಾಯಣ



(ಹೊಸನಾವಿಕ)

ಶಿವಮೊಗ್ಗ, ಸೆ. 11: ಹಿಂದೂ ಮಹಾಸಭಾದ ಅಂಗಸಂಸ್ಥೆಯಾದ ಹಿಂದೂ ಸಂಘಟನಾ ಮಹಾ ಮಂಡಳಿಯ ಸಭೆ ಸೆ.9ರಂದು ಶಿವಮೊಗ್ಗದಲ್ಲಿ ನಡೆಯಿತು. ಸಭೆಯಲ್ಲಿ ನಿಧನರಾದ ಸಂಸ್ಥೆಯ ಅಧ್ಯಕ್ಷ ಎಂ.ಕೆ. ಸುರೇಶ್ ಕುಮಾರ್ (ಚಾಲುಕ್ಯ ಸೂರಿ) ಅವರಿಂದ ತೆರವಾಗಿದ್ದ ಅಧ್ಯಕ್ಷ ಸ್ಥಾನಕ್ಕೆ ಸರಾಫ್ ಶ್ರೀಧರ್ ರಾವ್ ಹಾಗೂ ಕಾರ್ಯದರ್ಶಿ ಸ್ಥಾನಕ್ಕೆ ಎ.ಎನ್. ಸತ್ಯನಾರಾಯಣ ಅವರನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು.

ಸಭೆಯಲ್ಲಿ ಸಹಕಾರ್ಯದರ್ಶಿ ಎಸ್.ಎನ್. ಚನ್ನಬಸಪ್ಪ (ಚೆನ್ನಿ), ಖಜಾಂಚಿ ಎಸ್.ಎಂ. ದತ್ತಾತ್ರೇಯ ರಾವ್, ನಿರ್ದೇಶಕರಾದ ಸರಾಫ್ ಶ್ರೀಪಾದ ರಾವ್, ಹರಿಗೆ ಗೋಪಾಲಸ್ವಾಮಿ, ನಿರಂಜನ್, ರಾಜಶೇಖರ್ ಅಲಸೆ, ಚೇತನ್ ಎಸ್. ಹಾಗೂ ಚಂದ್ರಶೇಖರ್ (ರಾಜು) ಉಪಸ್ಥಿತರಿದ್ದರು.

ನೂತನ ಪದಾಧಿಕಾರಿಗಳ ನೇತೃತ್ವದಲ್ಲಿ ಸಂಘಟನೆಯ ಮುಂದಿನ ಕಾರ್ಯ ಚಟುವಟಿಕೆಗಳನ್ನು ಪರಿಣಾಮಕಾರಿಯಾಗಿ ರೂಪಿಸುವ ಕುರಿತು ಸಭೆಯಲ್ಲಿ ಚರ್ಚಿಸಲಾಯಿತು.

ಇದೇ ವೇಳೆ 82ನೇ ವರ್ಷದ ಗಣೇಶೋತ್ಸವವನ್ನು ಈ ಬಾರಿ ಅದ್ದೂರಿಯಾಗಿ ಆಚರಿಸಲು ನಿರ್ಧರಿಸಲಾಯಿತು. ಉತ್ಸವದ ಸಿದ್ಧತೆ, ಸಂಘಟನೆಯ ಚಟುವಟಿಕೆಗಳ ವಿಸ್ತರಣೆ ಹಾಗೂ ವಿವಿಧ ಕಾರ್ಯಕ್ರಮಗಳನ್ನು ವ್ಯವಸ್ಥಿತವಾಗಿ ನಡೆಸುವ ಕುರಿತು ಪದಾಧಿಕಾರಿಗಳು ಸಮಾಲೋಚನೆ ನಡೆಸಿದರು.

ಸಂಘಟನೆಯ ಆಶಯಗಳು ಹಾಗೂ ಚಟುವಟಿಕೆಗಳನ್ನು ಮತ್ತಷ್ಟು ಪರಿಣಾಮಕಾರಿಯಾಗಿ ಜನರಿಗೆ ತಲುಪಿಸುವ ನಿಟ್ಟಿನಲ್ಲಿ ಮುಂದಿನ ದಿನಗಳಲ್ಲಿ ಹಲವು ಕಾ ಯ ು ರ ಕ್ರ ವ ು ಗ ಳ ನ ್ನ ಹಮ್ಮಿಕೊಳ್ಳುವ ಬಗ್ಗೆಯೂ ಸಭೆಯಲ್ಲಿ ಚರ್ಚೆ ನಡೆಯಿತು.

# ಕಸ್ತೂರಿರಂಗನ್ ವರದಿ ರೈತರ ಪಾಲಿಗೆ ಮರಣಶಾಸನ

## ಕರಡು ಅಧಿಸೂಚನೆ ಹಿಂಪಡೆಯದಿದ್ದರೆ ಉಗ್ರ ಹೋರಾಟ: ಈಶ್ವರಪ್ಪ



(ಹೊಸನಾವಿಕ)

ಶಿಕಾರಿಪುರ, ಸೆ.11: ಕಸ್ತೂರಿ ರಂಗನ್ ವರದಿ ಪ್ರಾಮಾಣಿಕವಾಗಿ ಕೃಷಿ ಕಾರ್ಯದಲ್ಲಿ ತೊಡಗಿಸಿಕೊಂಡಿರುವ ರೈತರ ಪಾಲಿಗೆ ಮರಣಶಾಸನವಾಗಿದ್ದು, ಕೇಂದ್ರ ಸರ್ಕಾರ ಕೂಡಲೇ ಕರಡು ಅಧಿಸೂಚನೆಯನ್ನು ಹಿಂಪಡೆದು ರೈತರ ಹಿತಾಸಕ್ತಿ ಕಾಪಾಡಬೇಕು. ತಪ್ಪಿದಲ್ಲಿ ಎಲ್ಲ ರೀತಿಯ ಹೋರಾಟಕ್ಕೂ ಸಿದ್ಧ ಎಂದು ಕೃಷಿಭೂಮಿ ಉಳಿಸಿ ಹೋರಾಟ ಸಮಿತಿ ಅಧ್ಯಕ್ಷ ಹಾಗೂ ರಾಜ್ಯ ರೈತ ಸಂಘದ ಸಂಘಟನಾ ಕಾರ್ಯದರ್ಶಿ ಡಿ.ಎಸ್. ಈಶ್ವರಪ್ಪ ಎಚ್ಚರಿಸಿದರು.

ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯ ಹೊರಡಿಸಿರುವ ಕಸ್ತೂರಿರಂಗನ್ ವರದಿ ಅಧಿಸೂಚನೆ ರದ್ದುಗೊಳಿಸುವಂತೆ ಆಗ್ರಹಿಸಿ ತಾಲೂಕಿನ ವಿವಿಧ ಗ್ರಾಮಗಳ ರೈತರು ಹಾಗೂ ಸಾರ್ವಜನಿಕರು ಕುಟ್ರಳ್ಳಿಯಿಂದ ಶಿಕಾರಿಪುರ ತಾಲೂಕು ಕಚೇರಿವರೆಗೆ ಹಮ್ಮಿಕೊಂಡಿದ್ದ ಪಾದಯಾತ್ರೆಯ ಬಳಿಕ ನಡೆದ ಪ್ರತಿಭಟನಾ ಸಭೆಯಲ್ಲಿ ಅವರು ಮಾತನಾಡಿದರು.

ಜಕ್ಕನಹಳ್ಳಿ, ಕುಟ್ರಳ್ಳಿ, ಅಂಬಾರಗೊಪ್ಪ, ಶೀಲವಂತನಕೊಪ್ಪ, ಗುಡ್ಡದ ತುಮ್ಮಿನಕಟ್ಟೆ, ತುಮರಿ ಹೊಸೂರು, ಮದಗಹಾರನಳ್ಳಿ ಸೇರಿದಂತೆ ಹಲವು ಗ್ರಾಮಗಳು ಶೇ.100ರಷ್ಟು ಕೃಷಿ ಆಧಾರಿತ ಪ್ರದೇಶಗಳಾಗಿವೆ. ಸ್ವಾತಂತ್ರ್ಯ ಪೂರ್ವ ಹಾಗೂ ನಂತರದಲ್ಲಿ ಬಗರ್‌ಹುಕುಂ, ದರಖಾಸ್ತು, ಇನಾಂ ಹಾಗೂ ಅರಣ್ಯ ಹಕ್ಕು ಕಾಯ್ದೆಯಡಿ ರೈತರಿಗೆ ಸಾಗುವಳಿ ಹಕ್ಕು ದೊರೆತಿದ್ದು(2ನೇ ಪುಟಕ್ಕೆ)

# ವಿದ್ಯಾರ್ಥಿಗಳು ಜೀವನ ಕೌಶಲ್ಯಗಳನ್ನು ರೂಢಿಸಿಕೊಂಡು ಯಶಸ್ಸು ಸಾಧಿಸಿ : ಆದರ್ಶ್ ಹುಂಚದಕಟ್ಟೆ



ಶಿವಮೊಗ್ಗ, ಸೆ.11: ಸ್ಕೌಟ್ ಗೈಡ್ ತರಬೇತಿಯಲ್ಲಿ ಅನೇಕ ಜೀವನ ಕೌಶಲ್ಯಗಳ ವಿಷಯಗಳಿದ್ದು, ವಿದ್ಯಾರ್ಥಿಗಳು ಅವುಗಳನ್ನು ಜೀವನದಲ್ಲಿ ರೂಢಿಸಿಕೊಂಡರೆ ಯಶಸ್ಸನ್ನು ಸಾಧಿಸಬಹುದು ಎಂದು ರಾಷ್ಟ್ರೀಯ ವಕ್ತಾರರು ಹಾಗೂ ರಾಷ್ಟ್ರೀಯ ಯುವ ಕಾಂಗ್ರೆಸ್‌ನ ಆದರ್ಶ್ ಹುಂಚದಕಟ್ಟೆ ಹೇಳಿದರು.

ಜಿಲ್ಲಾ ಸ್ಕೌಟ್ ಭವನದಲ್ಲಿ ಪದವಿ ಪೂರ್ವ ಕಾಲೇಜುಗಳ ರೋವರ್ ರೇಂಜರ್ಸ್ ಗಳ ನಿಪುಣ್ ಪರೀಕ್ಷಾ ತರಬೇತಿ ಶಿಬಿರ ಸ ' ವ ' ಾ ಜ ವ ' ು ು ಖಿ ವನ್ನು ಉದ್ಘಾಟಿಸಿ ಮಾತನಾಡಿದ ಅವರು, ವಿದ್ಯಾರ್ಥಿಗಳು ವಿಜ್ಞಾನ, ವಾಣಿಜ್ಯ, ಕಲಾ ವಿಷಯಗಳ ಬಗ್ಗೆ ತಾರತಮ್ಯ ಬೇಡ, ಎಲ್ಲಾ ವಿಭಾಗಗಳು ವಿದ್ಯಾರ್ಥಿಗಳಿಗೆ ಸಮಾನ ಅವಕಾಶವನ್ನು ಒದಗಿಸುತ್ತವೆ ಎಂದು ತಿಳಿಸಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ಮುಖ್ಯ ಆಯುಕ್ತ ಶಕುಂತಲಾ ಚಂದ್ರಶೇಖರ್ ಮಾತನಾಡಿ, ವಿದ್ಯಾರ್ಥಿಗಳು ಸ್ಕೌಟ್ ಗೈಡ್ ಚಳುವಳಿಯ ಎಲ್ಲಾ ಹಂತಗಳಲ್ಲಿ ತರಬೇತಿ ಪಡೆದು ನಾಯಕರಾಗಬೇಕೆಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಲಕ್ಷ್ಮಿ ಎಸ್.ಕೆ ಎಲ್ಲರನ್ನು ಸ್ವಾಗತಿಸಿದರು. ಜಿಲ್ಲಾ ಆಯುಕ್ತರಾದ ಆನಂದ್, ಶಿಬಿರದ ನಾಯಕ ರಾಜೇಶ್ ಎ.ವಿ., ರೋ. ಕೆ.ರವಿ, ಜಿಲ್ಲಾ ಖಜಾಂಚಿ ಚೂಡಾಮಣಿ ಈ. ಪವಾರ್, ಎಡಿಸಿ ಮಲ್ಲಿಕಾರ್ಜುನ್ ಕಾನೂರು, ರೇಂಜರ್ ವಿಭಾಗದ ನಾಯಕಿ ಅನಿತಾ ಭಾಗವಹಿಸಿದ್ದರು. ಶಿಬಿರದಲ್ಲಿ 152 ರೋವರ್ ರೇಂಜರ್ಸ್ ಗಳು ನಿಪುಣ್ ಪದಕಕ್ಕೆ ಅರ್ಹತೆಯನ್ನು ಪಡೆದು ಯಶಸ್ವಿಯಾದರು.

# ಮಾಜಿ ಸಿಎಂ ದೇವರಾಜ ಅರಸು ಜಯಂತಿ ನಿಮಿತ್ತ ನಾಳೆ ವಿಚಾರ ಸಂಕಿರಣ - ಪುಸ್ತಕ ಬಿಡುಗಡೆ: ವಿ.ರಾಜು

(ಹೊಸನಾವಿಕ)

ಶಿವಮೊಗ್ಗ, ಸೆ.11: ಮಾಜಿ ಮುಖ್ಯಮಂತ್ರಿ ದಿವಂಗತ ಡಿ. ದೇವರಾಜ ಅರಸು ಅವರ 111ನೇ ಜಯಂತಿ ಅಂಗವಾಗಿ ಸೆ.12ರ ನಾಳೆ ಬೆಳಿಗ್ಗೆ 11ಕ್ಕೆ ನಗರದ ಆರ್‌ಟಿಒ ಕಚೇರಿ ರಸ್ತೆಯ ಪತ್ರಿಕಾಭವನದಲ್ಲಿ ಪುಷ್ಪ ನಮನ, ಪುಸ್ತಕ ಬಿಡುಗಡೆ ಹಾಗೂ ವಿಚಾರ ಸಂಕಿರಣ ಆಯೋಜಿಸಲಾಗಿದೆ ಎಂದು ಜಿಲ್ಲಾ ಹಿಂದುಳಿದ ಜಾತಿಗಳ ಒಕ್ಕೂಟದ ಅಧ್ಯಕ್ಷ ವಿ. ರಾಜು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜಿಲ್ಲಾ ಹಿಂದುಳಿದ ಜಾತಿಗಳ ಒಕ್ಕೂಟ, ಹಿಂದುಳಿದ



ಜನಜಾಗೃತಿ ವೇದಿಕೆ, ಎಸ್‌ಸಿ-ಎಸ್‌ಟಿ ನೌಕರರ ಸಂಘ, ಅತಿ ಹಿಂದುಳಿದ ವರ್ಗಗಳ ಜನಜಾಗೃತಿ ವೇದಿಕೆ, ಮಿಲಿಂದ್, ಜಮಾತೆ ಇಸ್ಲಾಮಿ (ಹಿಂದ್) ಹಾಗೂ ಹಿಂದುಳಿದ ವರ್ಗಗಳ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘಗಳ ಸಂಯುಕ್ತ ಆಶ್ರಯದಲ್ಲಿ ಕಾರ್ಯಕ್ರಮ ನಡೆಯಲಿದೆ ಎಂದರು.

ವಿ. ರಾಜು ಅಧ್ಯಕ್ಷತೆ ವಹಿಸಲಿದ್ದು, ಜಿಪಂ ಸಿಇಒ ಹೇಮಂತ್ ಎನ್. ವಿಶೇಷ ಆಹ್ವಾನಿತರಾಗಿ ಪಾಲ್ಗೊಳ್ಳುವರು. ಹಿಂದುಳಿದ ಜನಜಾಗೃತಿ ವೇದಿಕೆಯ ಗೌರವಾಧ್ಯಕ್ಷ ಪ್ರೊ. ಎಚ್. ರಾಚಪ್ಪ ಪ್ರಾಸ್ತಾವಿಕ ನುಡಿ ಆಡಲಿದ್ದಾರೆ.

ಸಾಮಾಜಿಕ ನ್ಯಾಯ- ಹಿಂದುಳಿದ ಜಾತಿಗಳ ಸವಾಲುಗಳು ಮತ್ತು ಪರಿಹಾರ ಕುರಿತು ರಾಜ್ಯ ಶಾಶ್ವತ ಹಿಂದುಳಿದ ವರ್ಗಗಳ ಆಯೋಗದ ಮಾಜಿ ಅಧ್ಯಕ್ಷ, ಮಾಜಿ ಅಡ್ವಕೇಟ್ ಜನರಲ್ ಪ್ರೊ. ರವಿವರ್ಮ ಕುಮಾರ್ ಹಾಗೂ ಹಿಂದುಳಿದ ವರ್ಗಗಳ ರಾಜಕೀಯ ಪ್ರಾತಿನಿಧ್ಯ: ಸಾಧ್ಯತೆ-ಸಾಧ್ಯತೆಗಳು ಕುರಿತು ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ಯೂನಿವರ್ಸಿಟಿಯ ಪ್ರಾಧ್ಯಾಪಕ ಡಾ. ಆರ್.ವಿ. ಚಂದ್ರಶೇಖರ್ ಉಪನ್ಯಾಸ ನೀಡಲಿದ್ದಾರೆ.

ಕಾರ್ಯಕ್ರಮದಲ್ಲಿ ಡಿ. ದೇವರಾಜ ಅರಸು ಜೀವನ ಚರಿತ್ರೆ ಕೃತಿ ಬಿಡುಗಡೆಗೊಳ್ಳಲಿದೆ. ವಿಧಾನ ಪರಿಷತ್ ಮಾಜಿ ಸದಸ್ಯ ಆರ್.ಕೆ. ಸಿದ್ದರಾಮಣ್ಣ, ಎಸ್‌ಸಿ-ಎಸ್‌ಟಿ ನೌಕರರ ಸಂಘದ ಅಧ್ಯಕ್ಷ ಎಲ್. ಹನುಮನಾಯ್ಕ ಸೇರಿದಂತೆ ಗಣ್ಯರು ಭಾಗವಹಿಸಲಿದ್ದಾರೆ.

ಬಾಲಪ್ಪ, ವಿಜಯಕುಮಾರ್, ನಾಗರಾಜ್, ಡಿ.ಟಿ. ವೆಂಕಟೇಶ್, ನಾಗರತ್ನಮ್ಮ ಹಾಗೂ ಸುಮಿತ್ರ ರಂಗನಾಥ ಉಪಸ್ಥಿತರಿದ್ದರು.

# ಆತ್ಮಶ್ರೇಷ್ಠ ಕೃಷಿಕ ಪ್ರಶಸ್ತಿಗೆ ಅರ್ಜಿ ಆಹ್ವಾನ

(ಹೊಸನಾವಿಕ)


ಶಿವಮೊಗ್ಗ, ಸೆ.11: 2026-27ನೇ ಸಾಲಿನಲ್ಲಿ ಕೃಷಿ ಕ್ಷೇತ್ರದಲ್ಲಿ ಸಾಧನೆಗೈದ ಜಿಲ್ಲೆಯ ಆಸಕ್ತ ರೈತ / ರೈತ ಮಹಿಳೆಯರಿಂದ ತಾಲ್ಲೂಕು ಮತ್ತು ಜಿಲ್ಲಾ ಮಟ್ಟದ ಆತ್ಮ ಶ್ರೇಷ್ಠ ಕೃಷಿಕ ಪ್ರಶಸ್ತಿಗೆ ಅರ್ಜಿ ಆಹ್ವಾನಿಸಲಾಗಿದೆ.

ಆತ್ಮ ಯೋಜನೆಯಡಿ ಕೃಷಿಯಲ್ಲಿ ಸಮಗ್ರ ಬೆಳೆ ಪದ್ಧತಿ, ಸಮಗ್ರ ನೀರು ನಿರ್ವಹಣೆ, ಸಾವಯವ ಕೃಷಿ, ವೈಜ್ಞಾನಿಕ ಯಂತ್ರೋಪಕರಣ ಬಳಕೆ, ತೋಟಗಾರಿಕೆ, ಹೈನುಗಾರಿಕೆ, ಕೋಳಿ ಸಾಕಾಣಿಕೆ, ಮೀನುಗಾರಿಕೆ, ರೇಷ್ಮೆಬೇಸಾಯ, ಹೈಟೆಕ್ ಹಸಿರುಮನೆ ಅಳವಡಿಕೆ, ಕೃಷಿ ಸಂಸ್ಕರಣೆ, ಅರಣ್ಯ ಕೃಷಿ, ಆಡು, ಕುರಿ, ಮೊಲ ಸಾಕಾಣಿಕೆ ಚಟುವಟಿಕೆಯಲ್ಲಿ ಸಾಧನೆ ಮಾಡಿದವರು ಪ್ರಶಸ್ತಿಗೆ ಅರ್ಹರಾಗಿರುತ್ತಾರೆ.

ಆಸಕ್ತರು ನಿಗದಿತ ನಮೂನೆಯ ಅರ್ಜಿಯನ್ನು ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕರ ಕಛೇರಿಯಿಂದ ಪಡೆದು ಸೆ.30ರ ಸಂಜೆ 5:30 ರೊಳಗೆ ಸಲ್ಲಿಸುವುದು. ಅಗತ್ಯ ಮಾಹಿತಿಗಾಗಿ ಜಿಲ್ಲೆಯ ಎಲ್ಲಾ ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕರ ಕಛೇರಿ ಹಾಗೂ ರೈತ ಸಂಪರ್ಕ ಕೇಂದ್ರದ ಅಧಿಕಾರಿಯವರನ್ನು ಸಂಪರ್ಕಿಸುವಂತೆ ಜಂಟಿ ಕೃಷಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿರುತ್ತಾರೆ.

ಹೊಸನಾವಿಕ ಪತ್ರಿಕೆ
ಮತ್ತು ವೆಬ್‌ಸೈಟ್‌ಗೆ
ಜಾಹೀರಾತು
ನೀಡಲು ಸಂಪರ್ಕಿಸಿ
94824 82182

# ಭದ್ರಾವತಿಯಲ್ಲಿ ಐವರು ಬಾಲ, ಕಿಶೋರ ಕಾರ್ಮಿಕರ ರಕ್ಷಣೆ



(ಹೊಸನಾವಿಕ)

ಶಿವಮೊಗ್ಗ, ಸೆ. 11: ಭದ್ರಾವತಿ ತಾಲೂಕಿನಲ್ಲಿ ಬಾಲಕಾರ್ಮಿಕರು ಹಾಗೂ ಕಿಶೋರ ಕಾರ್ಮಿಕರು ಕೆಲಸ ಮಾಡುತ್ತಿರುವ ಬಗ್ಗೆ ದೊರೆತ ಖಚಿತ ಮಾಹಿತಿ ಆಧರಿಸಿ ಕಾರ್ಮಿಕ ಇಲಾಖೆ ನೇತೃತ್ವದಲ್ಲಿ ನಡೆಸಿದ ಜಂಟಿ ವಿಶೇಷ ತಪಾಸಣಾ ಕಾರ್ಯಾಚರಣೆಯಲ್ಲಿ ಐವರು ಮಕ್ಕಳನ್ನು ರಕ್ಷಿಸಲಾಗಿದೆ.

ಕಾರ್ಮಿಕ ಇಲಾಖೆ, ಜಿಲ್ಲಾ ಬಾಲಕಾರ್ಮಿಕ ಯೋಜನಾ ಸೊಸೈಟಿ, ಪೊಲೀಸ್ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಮಕ್ಕಳ ಸಹಾಯವಾಣಿ ಹಾಗೂ ಭದ್ರಾವತಿಯ ಆಶ್ರಿತಾ ಸ್ವಯಂಸೇವಾ ಸಂಸ್ಥೆಯ ಸಹಯೋಗದಲ್ಲಿ ಕಾರ್ಯಾಚರಣೆ ನಡೆಯಿತು.

ಭದ್ರಾವತಿ ನಗರದ ವಿವಿಧ ವಾಣಿಜ್ಯ ಸಂಸ್ಥೆಗಳು, ಗ್ಯಾರೇಜುಗಳು ಹಾಗೂ ಗ್ರಾಮೀಣ ಪ್ರದೇಶಗಳ ಅಲೆಮಾರಿ ತಾಣಗಳಲ್ಲಿ ಪರಿಶೀಲನೆ ನಡೆಸಿದಾಗ ಮೂವರು ಬಾಲ ಕಾರ್ಮಿಕರು ಹಾಗೂ ಇಬ್ಬರು ಕಿಶೋರ ಕಾರ್ಮಿಕರು ಕೆಲಸ ಮಾಡುತ್ತಿರುವುದು ಪತ್ತೆಯಾಗಿದೆ. ರಕ್ಷಿಸಲಾದ ಮಕ್ಕಳನ್ನು ಕೆಲಸದಿಂದ ಬಿಡುಗಡೆಗೊಳಿಸಿ, ಮಕ್ಕಳ ಕಲ್ಯಾಣ ಸಮಿತಿಯ ಮುಂದೆ ಹಾಜರುಪಡಿಸಿ ದಾಖಲಿಸಲಾಗಿದೆ.

14 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳನ್ನು ಯಾವುದೇ ಕೆಲಸಕ್ಕೆ ಹಾಗೂ 18 ವರ್ಷದೊಳಗಿನ ಕಿಶೋರರನ್ನು ಅಪಾಯಕಾರಿ ಉದ್ಯಮಗಳಲ್ಲಿ ನೇಮಿಸಿಕೊಳ್ಳುವುದು ಶಿಕ್ಷಾರ್ಹ ಅಪರಾಧವಾಗಿದೆ. ತಪ್ಪಿತಸ್ಥ ಮಾಲೀಕರಿಗೆ 6 ತಿಂಗಳಿಂದ 2 ವರ್ಷಗಳವರೆಗೆ ಜೈಲು ಶಿಕ್ಷೆ ಅಥವಾ ರೂ.20 ಸಾವಿರದಿಂದ ರೂ.50 ಸಾವಿರದವರೆಗೆ ದಂಡ, ಇಲ್ಲವೇ ಎರಡನ್ನೂ ವಿಧಿಸಲು ಕಾನೂನಿನಲ್ಲಿ ಅವಕಾಶವಿದೆ. ಅಪರಾಧ ಪುನರಾವರ್ತನೆಯಾದಲ್ಲಿ 1ರಿಂದ 3 ವರ್ಷಗಳವರೆಗೆ ಜೈಲು ಶಿಕ್ಷೆ ವಿಧಿಸಬಹುದು. ಅಲ್ಲದೆ, ಪ್ರತಿ ಮಗುವಿಗೆ ರೂ.20 ಸಾವಿರವನ್ನು ಮಕ್ಕಳ ಪುನರ್ವಸತಿ ಕಲ್ಯಾಣ ನಿಧಿಗೆ ಪಾವತಿಸಬೇಕಾಗುತ್ತದೆ. ಬಾಲಕಾರ್ಮಿಕರ ಕುರಿತು ಮಕ್ಕಳ ಸಹಾಯವಾಣಿ 1098 ಹಾಗೂ ಕಾರ್ಮಿಕರ ಸಹಾಯವಾಣಿ 155214ಕ್ಕೆ ದೂರು ನೀಡಬಹುದು.

# ಕಂದಾಯ ಇಲಾಖಾ ನೌಕರರ ವಸತಿ ಸಹಕಾರ ಸಂಘದ ಸರ್ವಸದಸ್ಯರ ಸಭೆ

(ಹೊಸನಾವಿಕ)

ಶಿವಮೊಗ್ಗ, ಸೆ.11: ಕಂದಾಯ ಇಲಾಖಾ ನೌಕರರ ವಸತಿ ಸಹಕಾರ ಸಂಘದವು 2025-26ನೇ ಸಾಲಿನ ಸರ್ವ ಸದಸ್ಯರ ಸಭೆಯನ್ನು ಸೆ. 20 ರಂದು ಬೆಳಗ್ಗೆ 11.25 ಕ್ಕೆ ಜಿಲ್ಲಾಧಿಕಾರಿಗಳ ಕಚೇರಿ ಆವರಣದಲ್ಲಿರುವ ಜಿಲ್ಲಾ ನಿವೃತ್ತ ನೌಕರರ ಸಂಘದ ಕಟ್ಟಡದ 1ನೇ ಮಹಡಿಯ ಸ್ಕಿಫ್ಟ್ ಸಭಾಂಗಣದಲ್ಲಿ ಸಂಘದ ಅಧ್ಯಕ್ಷ ಶಿವಮೂರ್ತಿ ಎ.ಎಕೆ. ಇವರ ಅಧ್ಯಕ್ಷತೆಯಲ್ಲಿ ನಡೆಯಲಿದ್ದು, ಸಂಘದ ಸದಸ್ಯರು ನಿಗದಿತ ಸಮಯದಲ್ಲಿ ಹಾಜರಾಗುವಂತೆ ಸಂಘದ ಸಿಇಒ ಬಿ.ಡಿ.ದಾನಪ್ಪ ತಿಳಿಸಿರುತ್ತಾರೆ.

# ದಸರಾ ಕ್ರೀಡಾಕೂಟ ಯುವಜನರ ಸಮಗ್ರ ವಿಕಾಸಕ್ಕೆ ವೇದಿಕೆಯಾಗಿದೆ: ಎಡಿಸಿ ಅಭಿಷೇಕ್



(ಹೊಸನಾವಿಕ)

ಶಿವಮೊಗ್ಗ, ಸೆ.11: ದಸರಾ ಕ್ರೀಡಾಕೂಟ ಕೇವಲ ಸ್ಪರ್ಧೆಯಲ್ಲ, ಆರೋಗ್ಯವಂತ, ಶಿಸ್ತಿನ, ಆತ್ಮವಿಶ್ವಾಸಿ ಹಾಗೂ ಜವಾಬ್ದಾರಿಯುತ ಯುವ ಜನತೆಯನ್ನು ರೂಪಿಸುವ ಮಹತ್ವದ ವೇದಿಕೆಯಾಗಿದೆ ಎಂದು ಅಪರ ಜಿಲ್ಲಾಧಿಕಾರಿ ಅಭಿಷೇಕ್ ವಿ. ಹೇಳಿದರು.

ನಗರದ ನೆಹರೂ ಕ್ರೀಡಾಂಗಣದಲ್ಲಿ ಜಿಲ್ಲಾಡಳಿತ, ಜಿಪಂ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಆಶ್ರಯದಲ್ಲಿ ಆಯೋಜಿಸಿರುವ ಎರಡು ದಿನಗಳ ಜಿಲ್ಲಾ ಮಟ್ಟದ ದಸರಾ ಕ್ರೀಡಾಕೂಟವನ್ನು ಉದ್ಘಾಟಿಸಿ ಮಾತನಾಡಿದ ಅವರು, ಕ್ರೀಡೆಯಲ್ಲಿ ತೊಡಗಿಸಿಕೊಳ್ಳುವುದರಿಂದ ದೈಹಿಕ ಸದೃಢತೆ, ಚುರುಕುತನ ಹಾಗೂ ರೋಗ ನಿರೋಧಕ ಶಕ್ತಿ ಹೆಚ್ಚುವುದರ ಜತೆಗೆ ಮಾನಸಿಕ ಆರೋಗ್ಯವೂ ಸುಧಾರಿಸುತ್ತದೆ. ಒತ್ತಡ, ಆತಂಕ ಹಾಗೂ ಏಕತಾನತೆ ಕಡಿಮೆಯಾಗಿ ಉತ್ಸಾಹ ಹೆಚ್ಚುತ್ತದೆ. ಶಿಸ್ತು, ಸ ' ವ ' ು ಯ ು ಪಾ ಲ ನೆ ' , ನಿಯಮಾನುಸರಣೆ ಹಾಗೂ ಗುರಿ ಸಾಧಿಸುವ ಮನೋಭಾವ ಕ್ರೀಡೆಯಿಂದ ಬೆಳೆಸಿಕೊಳ್ಳಬಹುದು ಎಂದರು.

ನಾಡಹಬ್ಬ ದಸರಾ ನಾಡಿನ ಸಂಸ್ಕೃತಿ ಮತ್ತು ಭವ್ಯ ಪರಂಪರೆಯ ಪ್ರತೀಕವಾಗಿದ್ದು, ಕ್ರೀಡೆಗಳೂ ಅದರ ಸಂಭ್ರಮದ ಪ್ರಮುಖ ಭಾಗವಾಗಿವೆ. ಯುವಕರು ಸದಾ ಕ್ರಿಯಾಶೀಲರಾಗಿರಲು ಕ್ರೀಡೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬೇಕು ಎಂದು ಸಲಹೆ ನೀಡಿದರು.

ಸರ್ಕಾರಿ ನೌಕರರ ಸಂಘದ ರಾಜ್ಯಾಧ್ಯಕ್ಷ ಸಿ.ಎಸ್. ಷಡಾಕ್ಷರಿ ಮಾತನಾಡಿ, ಗ್ರಾಮೀಣ ಹಾಗೂ ಪ್ರತಿಭಾವಂತ ಕ್ರೀಡಾಪಟುಗಳಿಗೆ ತಮ್ಮ ಸಾಮರ್ಥ್ಯ ಪ್ರದರ್ಶಿಸಲು ದಸರಾ ಕ್ರೀಡಾಕೂಟ ಉತ್ತಮ ಅವಕಾಶವಾಗಿದೆ. ಸಾಧನೆ ಮಾಡುವವರಿಗೆ ರಾಜ್ಯ, ರಾಷ್ಟ್ರ ಮಟ್ಟದ ಸ್ಪರ್ಧೆಗಳು ಹಾಗೂ ಕ್ರೀಡಾ ಕೋಟಾದಡಿ ಶಿಕ್ಷಣ ಮತ್ತು ಉದ್ಯೋಗದ ಅವಕಾಶಗಳು ದೊರೆಯಲಿವೆ ಎಂದರು.


ತಾಲೂಕು ಮಟ್ಟದಲ್ಲಿ ಆಯ್ಕೆಯಾದ ಕ್ರೀಡಾಪಟುಗಳು ಜಿಲ್ಲಾ ಮಟ್ಟದಲ್ಲಿ ಭಾಗವಹಿಸುತ್ತಿದ್ದು, ವಿಜೇತರು ರಾಜ್ಯ, ರಾಷ್ಟ್ರ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ಸಾಧನೆ ಮಾಡಿ ಜಿಲ್ಲೆಗೆ ಕೀರ್ತಿ ತರಬೇಕು ಎಂದು ಆಶಿಸಿದರು.

ಸಹಾಯಕ ನಿರ್ದೇಶಕ ರೇಖ್ಯಾನಾಯ್ಕ್, ನೆಹರು ಯುವ ಕೇಂದ್ರದ ಯುವ ಸಮನ್ವಯಾಧಿಕಾರಿ ಐಶ್ವರ್ಯಾ ಶ್ರೀನಿವಾಸ್, ವಾರ್ತಾ ಇಲಾಖೆಯ ಸಹಾಯಕ ನಿರ್ದೇಶಕ ಆರ್. ಮಾರುತಿ ಸೇರಿದಂತೆ ಗಣ್ಯರು ಹಾಗೂ ಕ್ರೀಡಾಪಟುಗಳು ಉಪಸ್ಥಿತರಿದ್ದರು.

# ಶಿಕ್ಷಣದ ಜತೆಗೆ ಸಂಸ್ಕಾರವೂ ಅಗತ್ಯ: ಡಾ. ಜೋಷಿ

(ಹೊಸನಾವಿಕ)

ದಾವಣಗೆರೆ, ಸೆ.11: ನಗರದ ಎ.ಆರ್.ಎಂ ಪ್ರಥಮ ದರ್ಜೆ ಕಾಲೇಜು ಹಾಗೂ ಸ್ನಾತಕೋತ್ತರ ಕೇಂದ್ರದಲ್ಲಿ 2026-27ನೇ ಶೈಕ್ಷಣಿಕ ಸಾಲಿನ ಉದ್ಘಾಟನಾ ಸಮಾರಂಭ ನಡೆಯಿತು.



ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ದಾವಣಗೆರೆ ವಿವಿ ಕನ್ನಡ ಅಧ್ಯಯನ ವಿಭಾಗದ ಸಹಾಯಕ ಪ್ರಾಧ್ಯಾಪಕ ಡಾ. ಭೀಮಾಶಂಕರ ಜೋಷಿ, ವಿದ್ಯಾರ್ಥಿಗಳಲ್ಲಿರುವ ಸುಪ್ತ ಪ್ರತಿಭೆಯನ್ನು ಹೊರತಂದು, ಅದಕ್ಕೆ ಸೂಕ್ತ ವೇದಿಕೆ ಕಲ್ಪಿಸುವುದೇ ಶಿಕ್ಷಣದ ಉದ್ದೇಶ. ಅಂಕಗಳ ಗಳಿಕೆಯ ಜತೆಗೆ ವ್ಯವಹಾರ ಜ್ಞಾನ ಹಾಗೂ ಸಂಸ್ಕಾರವನ್ನು ಬೆಳೆಸಿಕೊಳ್ಳುವುದು ಅತ್ಯಂತ ಮುಖ್ಯ ಎಂದರು.

ಶಿಕ್ಷಣ ಮತ್ತು ಸಂಸ್ಕಾರವನ್ನು ರೂಢಿಸಿಕೊಂಡವರು ಜೀವನದಲ್ಲಿ ಎಲ್ಲಿಯೂ ಎಡವುವುದಿಲ್ಲ. ಮೊಬೈಲ್ ಬಳಕೆಯ ಗೀಳು ಹೆಚ್ಚುತ್ತಿರುವ ಇಂದಿನ ದಿನಗಳಲ್ಲಿ, ಅದರ ಸದುಪಯೋಗ ಪಡೆದು ಜ್ಞಾನವನ್ನು ಹೆಚ್ಚಿಸಿಕೊಳ್ಳಬೇಕು. ಮೊಬೈಲ್‌ನ ಅತಿಯಾದ ಬಳಕೆಯಿಂದ ಮಾನವೀಯ ಸಂಬಂಧಗಳು ಕ್ಷೀಣಿಸುತ್ತಿರುವುದು ವಿಷಾದನೀಯ ಎಂದು ಹೇಳಿದರು.

ಜೀವನದಲ್ಲಿ ಸುಳ್ಳು ಕ್ಷಣಿಕ ಸುಖ ನೀಡಬಹುದು. ಆದರೆ ಸತ್ಯವೇ ವ್ಯಕ್ತಿಯನ್ನು ಸರಿಯಾದ ಮಾರ್ಗದಲ್ಲಿ ಮುನ್ನಡೆಸುತ್ತದೆ. ವಿದ್ಯಾರ್ಥಿಗಳು ನಿರ್ದಿಷ್ಟ ಗುರಿ ಹೊಂದಿ, ಸತತ ಪ್ರಯತ್ನದ ಮೂಲಕ ಅದನ್ನು ಸಾಧಿಸುವ ಸಂಕಲ್ಪ ಮಾಡಬೇಕು. ಸಣ್ಣಪುಟ್ಟ ಸಮಸ್ಯೆಗಳಿಗೆ ಧೃತಿಗೆಡದೆ, ಮಾನವ ಜನ್ಮದ ಮಹತ್ವ ಅರಿತು ಬದುಕಬೇಕು. ಕಾಗೆಯ ದೃಷ್ಟಿ, ಬಕಪಕ್ಷಿಯ ಧ್ಯಾನ, ಶ್ವಾನದ ನಿದ್ರೆ, ಅಲ್ಪಾಹಾರ, ಸುಖತ್ಯಾಗ ಹಾಗೂ ಚಿಕಿತ್ಸಕ ಬುದ್ಧಿಯನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ತಂದೆ-ತಾಯಿ, ಸಮಾಜ ಹಾಗೂ ವಿದ್ಯೆ ಕಲಿಸಿದ ಗುರುಗಳ ಋಣ ತೀರಿಸುವ ಜವಾಬ್ದಾರಿ ಪ್ರತಿಯೊಬ್ಬರ ಮೇಲಿದೆ. ಜ್ಞಾನ ಮತ್ತು ಸಂಸ್ಕಾರವನ್ನು ಮೈಗೂಡಿಸಿಕೊಂಡು ಉತ್ತಮ ಜೀವನ ರೂಪಿಸಿಕೊಳ್ಳಬೇಕು ಎಂದು ಕಿವಿಮಾತು ಹೇಳಿದರು.

ಶ್ರೀ ದೇವರಾಜ ಅರಸು ವಿದ್ಯಾ ಸಂಸ್ಥೆಯ ಕಾರ್ಯದರ್ಶಿ ಎಲ್. ಭರತ್ ಅಧ್ಯಕ್ಷತೆ ವಹಿಸಿದ್ದರು. ಆಡಳಿತಾಧಿಕಾರಿ ಸೋಮಶೇಖರ ಬಿ. ಕಿಚಿಡಿ, ಪ್ರಾಂಶುಪಾಲ ಕಾಡಜ್ಜಿ ಶಿವಪ್ಪ ಸೇರಿದಂತೆ ಬೋಧಕ-ಬೋಧಕೇತರ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ಭದ್ರಾವತಿಯ ಶ್ರೀ ತಿರುಮಲ ಚಾರಿಟೇಬಲ್ ಫೌಂಡೇಶನ್‌ನಿಂದ ಸರ್ಕಾರಿ ಶಾಲಾ ಮಕ್ಕಳಿಗೆ ಕರಾಟೆ ತರಬೇತಿ; ಪರಿಸರ ಜಾಗೃತಿಗೂ ಒತ್ತು

(ಹೊಸನಾವಿಕ)

ಭದ್ರಾವತಿ, ಸೆ. 11: ಮಕ್ಕಳನ್ನು ಶೈಕ್ಷಣಿಕವಾಗಿ ಮಾತ್ರವಲ್ಲದೆ ದೈಹಿಕ, ಮಾನಸಿಕ ಹಾಗೂ ಸಾಮಾಜಿಕವಾಗಿ ಸದೃಢರನ್ನಾಗಿ ರೂಪಿಸುವ ಉದ್ದೇಶದಿಂದ ಶ್ರೀ ತಿರುಮಲ ಚಾರಿಟೇಬಲ್ ಫೌಂಡೇಶನ್ (ರಿ.), ಭದ್ರಾವತಿ ವತಿಯಿಂದ ವಿವಿಧ ಸಾಮಾಜಿಕ ಕಳಕಳಿಯ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಇದರ ಅಂಗವಾಗಿ ಹೊಸಮನೆ ಸರ್ಕಾರಿ ಕನ್ನಡ ಶಾಲೆಯ ಸುಮಾರು 40 ಮಕ್ಕಳಿಗೆ ಕರಾಟೆ ತರಬೇತಿ ನೀಡಲಾಗಿದ್ದು, ಆತ್ಮವಿಶ್ವಾಸ, ಶಿಸ್ತು, ದೈಹಿಕ ಸಾಮರ್ಥ್ಯ ಹಾಗೂ ಆತ್ಮರಕ್ಷಣೆಯ ಕುರಿತು ಅರಿವು ಮೂಡಿಸಲಾಯಿತು.



ಪ್ರೇಮ ಮತ್ತು ಮನೋಜ್ ಅವರು ತರಬೇತಿ ನೀಡಿದರು. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಡಿವೈಎಸ್ಪಿ ಪ್ರಕಾಶ್ ರಾಥೋಡ್ ಅವರು ಮಕ್ಕಳೊಂದಿಗೆ ಸಂವಾದ ನಡೆಸಿ, ಕ್ರೀಡೆ ಹಾಗೂ ಆತ್ಮರಕ್ಷಣೆಯ ಮಹತ್ವವನ್ನು ತಿಳಿಸಿದರು. ನಾಗರಾಜ್ ಹಾಗೂ ಎಚ್.ಆರ್. ಮುಖ್ಯ ಉಪಾಧ್ಯಕ್ಷರು ಸೇರಿದಂತೆ ಗಣ್ಯರು ಉಪಸ್ಥಿತರಿದ್ದರು.

ತರಬೇತಿ ಪಡೆದ ಮಕ್ಕಳಲ್ಲಿ 8 ಮಂದಿಯನ್ನು ತರೀಕೆರೆ ಕರಾಟೆ ಓಪನ್ ಚಾಂಪಿಯನ್ ಶಿಪ್‌ಗೆ ಆಯ್ಕೆ ಮಾಡಲಾಗಿತ್ತು. ಸ್ಪರ್ಧೆಯಲ್ಲಿ ಸರ್ಕಾರಿ ಶಾಲಾ ಮಕ್ಕಳು ಕಟಾಸ್ ಹಾಗೂ ಫೈಟ್ ವಿಭಾಗಗಳಲ್ಲಿ ಪ್ರಥಮ ಮತ್ತು ತೃತೀಯ ಸ್ಥಾನಗಳನ್ನು ಪಡೆದು ಶಾಲೆ ಹಾಗೂ ಭದ್ರಾವತಿಗೆ ಕೀರ್ತಿ ತಂದರು.

ಪರಿಸರ ಜಾಗೃತಿ ಕಾರ್ಯಕ್ರಮದಡಿ ಮಕ್ಕಳು ತಮ್ಮ ಮನೆಗಳ ಸಮೀಪ 20 ಸಸಿಗಳನ್ನು ನೆಟ್ಟು, ಅವುಗಳ ಪಾಲನೆ-ಪೋಷಣೆಯ ಜವಾಬ್ದಾರಿ ವಹಿಸಿಕೊಳ್ಳುವಂತೆ ಪ್ರೋತ್ಸಾಹಿಸಲಾಯಿತು. ಒಂದು ಮಗು-ಒಂದು ಗಿಡ-ಒಂದು ಭವಿಷ್ಯ ಪರಿಕಲ್ಪನೆಯಡಿ ಪರಿಸರ ಸಂರಕ್ಷಣೆಯ ಸಂದೇಶ ಸಾರಲಾಯಿತು.

ಇದೇ ವೇಳೆ ಸಂಚಿ ಹೊನ್ನಮ್ಮ ಬಾಲಕಿಯರ ಪ್ರೌಢಶಾಲೆಯಲ್ಲಿ 100 ವಿವಿಧ ಜಾತಿಯ ಸಸಿ-ಗಿಡಗಳನ್ನು ವಿತರಿಸಲಾಯಿತು. ಶಿಕ್ಷಣದ ಜತೆಗೆ ಕ್ರೀಡೆ, ಆತ್ಮರಕ್ಷಣೆ ಹಾಗೂ ಪರಿಸರ ಪ್ರಜ್ಞೆ ಬೆಳೆಸುವ ನಿಟ್ಟಿನಲ್ಲಿ ಫೌಂಡೇಶನ್ ಮುಂದೆಯೂ ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಿದೆ ಎಂದು ತಿಳಿಸಲಾಯಿತು.

# ಭದ್ರಾವತಿ: ಗೌರಿ-ಗಣೇಶ ಹಬ್ಬದ ಸಂದರ್ಭದಲ್ಲಿ ಗೊಂದಲಗಳಿಗೆ ಅವಕಾಶ ನೀಡದೆ ಸೌಹಾರ್ದ ಕಾಪಾಡಲು ಮುಖಂಡರ ಕರೆ





(ಹೊಸನಾವಿಕ)

ಭದ್ರಾವತಿ, ಸೆ.11: ಹಬ್ಬಗಳನ್ನು ಎಲ್ಲರೂ ಒಗ್ಗಟ್ಟಿನಿಂದ, ಸೌಹಾರ್ದಯುತವಾಗಿ ಆಚರಿಸಬೇಕು. ಹಬ್ಬದ ಸಂದರ್ಭದಲ್ಲಿ ಅತಿರೇಕ ಹಾಗೂ ದುವರ್ತನೆಗೆ ಅವಕಾಶ ನೀಡದೆ, ಪರಸ್ಪರರ ಭಾವನೆಗಳನ್ನು ಗೌರವಿಸುವ ಮೂಲಕ ಶಾಂತಿ ಮತ್ತು ಸೌಹಾರ್ದತೆ ಕಾಪಾಡಬೇಕು ಎಂದು ವಿವಿಧ ಸಂಘ-ಸಂಸ್ಥೆಗಳ ಹಾಗೂ ಸರ್ವಧರ್ಮಗಳ ಮುಖಂಡರು ಕರೆ ನೀಡಿದರು.

ನಗರದ ಬಿ.ಎಚ್. ರಸ್ತೆಯ ಶ್ರೀ ಮಂಜುನಾಥಸ್ವಾಮಿ ಕಲ್ಯಾಣ ಮಂಟಪದಲ್ಲಿ ಗೌರಿ-ಗಣೇಶ ಹಬ್ಬದ ಹಿನ್ನೆಲೆಯಲ್ಲಿ ಪೊಲೀಸ್ ಉಪವಿಭಾಗದ ವತಿಯಿಂದ ಆಯೋಜಿಸಿದ್ದ ನಾಗರಿಕರ ಸೌಹಾರ್ದ ಸಭೆಯಲ್ಲಿ ಮುಖಂಡರು ಮಾತನಾಡಿದರು.

ಹಿಂದೂ ಮಹಾಸಭಾ ಹಿಂದೂ ರಾಷ್ಟ್ರ ಸೇನಾ ಶ್ರೀ ವಿನಾಯಕ ಸೇವಾ ಸಮಿತಿ ಅಧ್ಯಕ್ಷ ವಿ. ಕದಿರೇಶ್, ಅಂಜುಮನ್ ಇಸ್ಲಾವುಲ್ ಮುಸ್ಲಿಮೀನ್ ಅಧ್ಯಕ್ಷ ಆಯೂಬ್ ಖಾನ್, ನಗರಸಭೆ ಮಾಜಿ ಉಪಾಧ್ಯಕ್ಷ ಚನ್ನಪ್ಪ, ಮಾಜಿ ಸದಸ್ಯ ದಿಲ್‌ದಾರ್, ಹಿಂದೂ ಜಾಗೃತಿ ವೇದಿಕೆಯ ಅರಳಿಹಳ್ಳಿ ದೇವರಾಜ್, ಪೋಕಸ್ ಮಂಜುನಾಥ್, ನಗರಸಭೆ ಮಾಜಿ ಅಧ್ಯಕ್ಷೆ ಲತಾ ಚಂದ್ರಶೇಖರ್, ಹೆಬ್ಬಂಡಿ ನಾಗರಾಜ್ ಸೇರಿದಂತೆ ಹಲವು ಮುಖಂಡರು ಮಾತನಾಡಿ, ಯಾವುದೇ ಹಬ್ಬವಾದರೂ ಪ್ರೀತಿ, ಸಹೋದರತ್ವ ಹಾಗೂ ಸೌಹಾರ್ದತೆಯಿಂದ ಆಚರಿಸುವುದು ಮುಖ್ಯ. ಇನ್ನೊಬ್ಬರಿಗೆ ನೋವುಂಟು ಮಾಡಿ ಹಬ್ಬ ಆಚರಿಸುವುದರಲ್ಲಿ ಯಾವುದೇ ಅರ್ಥವಿಲ್ಲ. ಪ್ರತಿಯೊಂದು ಹಬ್ಬಕ್ಕೂ ತನ್ನದೇ ಆದ ಧಾರ್ಮಿಕ ಹಾಗೂ ಸಾಂಸ್ಕೃತಿಕ ಮಹತ್ವವಿದ್ದು, ಅದನ್ನು ಅರಿತು ಇತರರ ಭಾವನೆಗಳಿಗೆ ಗೌರವ ನೀಡಬೇಕು ಎಂದರು.

ಭದ್ರಾವತಿ ನಗರದಲ್ಲಿ ಹಿಂದೂ- ಮುಸ್ಲಿಂ ಸೇರಿದಂತೆ ಎಲ್ಲ ಧರ್ಮಗಳ ಜನರು ಪರಸ್ಪರ ಸೌಹಾರ್ದತೆಯಿಂದ ಹಬ್ಬಗಳನ್ನು ಆಚರಿಸಿಕೊಂಡು ಬಂದಿದ್ದಾರೆ. ಈ ಬಾರಿಯೂ ಗೌರಿ-ಗಣೇಶ ಹಬ್ಬ ಶಾಂತಿಯುತವಾಗಿ ನಡೆಯಲು ಎಲ್ಲರೂ ಸಹಕರಿಸಬೇಕು. ಅನಗತ್ಯ ಗೊಂದಲಗಳಿಗೆ ಅವಕಾಶ ನೀಡದೆ ಕಾನೂನು-ಸುವ್ಯವಸ್ಥೆ ಹಾಗೂ ಶಾಂತಿ ಕಾಪಾಡಬೇಕು ಎಂದು ಮನವಿ ಮಾಡಿದರು.

ಪೊಲೀಸ್ ವರಿಷ್ಠಾಧಿಕಾರಿ ಬಿ. ನಿಖಿಲ್ ಸಭೆಯ ನೇತೃತ್ವ ವಹಿಸಿದ್ದರು. ಸರ್ವಧರ್ಮಗಳ ಮುಖಂಡರು ಅವರನ್ನು ಸನ್ಮಾನಿಸಿ ಗೌರವಿಸಿದರು. ಇದೇ ವೇಳೆ ಮುಸ್ಲಿಂ ಸಮುದಾಯದ ಮುಖಂಡರು ವಿ. ಕದಿರೇಶ್ ಅವರನ್ನು ಶಾಲು ಹೊದಿಸಿ ಸನ್ಮಾನಿಸಿದರು.

ತಹಸೀಲ್ದಾರ್ ಗ್ರೇಡ್-2 ಸುರೇಶ್, ನಗರಸಭೆ ಪೌರಾಯುಕ್ತ ಕೆ.ಎನ್. ಹೇಮಂತ್, ವಲಯ ಅರಣ್ಯಾಧಿಕಾರಿ ಕೆ.ಆರ್. ರಾಜೇಶ್, ಅಗ್ನಿಶಾಮಕ ಠಾಣಾಧಿಕಾರಿ ಆನಂದ್, ಪೊಲೀಸ್ ವೃತ್ತ ನಿರೀಕ್ಷಕರಾದ ಕೆ. ನಾಗಮ್ಮ ಹಾಗೂ ಚಿದಾನಂದ ಉಪಸ್ಥಿತರಿದ್ದರು. ಪೊಲೀಸ್ ಉಪಾಧೀಕ್ಷಕ ಪ್ರಕಾಶ್ ರಾಥೋಡ್ ಸ್ವಾಗತಿಸಿದರು. ವಿವಿಧ ಸಂಘ-ಸಂಸ್ಥೆಗಳು, ರಾಜಕೀಯ ಪಕ್ಷಗಳ ಮುಖಂಡರು, ಜನಪ್ರತಿನಿಧಿಗಳು ಹಾಗೂ ಗಣ್ಯರು ಭಾಗವಹಿಸಿದ್ದರು.

# ಶಿವಮೊಗ್ಗದಲ್ಲಿ ಮೊಳಗಿದ ಸೌಹಾರ್ದದ ಹೆಜ್ಜೆಗಳು

## ನಮ್ಮ ನಡಿಗೆ ಶಾಂತಿ ಕಡೆಗೆ, ಸೌಹಾರ್ದವೇ ಹಬ್ಬ: ಘೋಷಣೆಯೊಂದಿಗೆ ಸಾವಿರಾರು ಮಂದಿ ಭಾಗಿ



(ಹೊಸನಾವಿಕ)

ಶಿವಮೊಗ್ಗ, ಸೆ. 11: ನಮ್ಮ ನಡಿಗೆ ಶಾಂತಿ ಕಡೆಗೆ, ಸೌಹಾರ್ದವೇ ಹಬ್ಬ ಎಂಬ ಘೋಷವಾಕ್ಯದೊಂದಿಗೆ ಶಾಂತಿನಡಿಗೆ ಬಳಗದಿಂದ ನಗರದಲ್ಲಿ ಆಯೋಜಿಸಿದ್ದ ಬೃಹತ್ ಶಾಂತಿ ನಡಿಗೆ ಹಾಗೂ ಸೌಹಾರ್ದ ಹಬ್ಬ ಯಶಸ್ವಿಯಾಗಿ ನಡೆಯಿತು.

ಸಮಾಜದಲ್ಲಿ ಆವರಿಸಿರುವ ಅಶಾಂತಿ, ಆತಂಕ ಹಾಗೂ ದ್ವೇಷದ ವಾತಾವರಣವನ್ನು ದೂರ ಮಾಡಿ ಭ್ರಾತೃತ್ವ, ಸಹಬಾಳ್ವೆ ಮತ್ತು ಸೌಹಾರ್ದತೆಯ ಸಂದೇಶ ಸಾರುವ ಉದ್ದೇಶದಿಂದ ಆಯೋಜಿಸಿದ್ದ ಶಾಂತಿ ನಡಿಗೆಗೆ ನಗರದ ಅಂಬೇಡ್ಕರ್ ಭವನದ ಆವರಣದಲ್ಲಿ ಚಾಲನೆ ನೀಡಲಾಯಿತು.

ವಿವಿಧ ಧರ್ಮಗಳ ಧರ್ಮಗುರುಗಳು, ಚಿಂತಕರು, ಸಾಹಿತಿಗಳು ಹಾಗೂ ಸಮಾನ ಮನಸ್ಕರ ಉಪಸ್ಥಿತಿಯಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ. ನಿಖಿಲ್ ಅವರು ನಡಿಗೆಗೆ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, ಸಮಾಜದಲ್ಲಿ ಶಾಂತಿ ಮತ್ತು ಸೌಹಾರ್ದತೆ ಕಾಪಾಡುವುದು ಇಂದಿನ ತುರ್ತು ಅಗತ್ಯವಾಗಿದೆ. ಕಲುಷಿತಗೊಳ್ಳುತ್ತಿರುವ ಸಾಮಾಜಿಕ ವಾತಾವರಣದ ನಡುವೆ ಯುವಜನರಲ್ಲಿ ಧರ್ಮ ನಿರಪೇಕ್ಷತೆ ಹಾಗೂ ಸಾಮಾಜಿಕ ಸಾಮರಸ್ಯದ ಅರಿವು ಮೂಡಿಸುವ ಇಂತಹ ಕಾರ್ಯಕ್ರಮಗಳು ದಾರಿದೀಪವಾಗಿವೆ ಎಂದರು.

ಎಲ್ಲರೂ ಧರ್ಮ, ಜಾತಿ ಹಾಗೂ ಭಾಷೆಯ ಭೇದಗಳನ್ನು ಬದಿಗೊತ್ತಿ ಪರಸ್ಪರ ಗೌರವ ಮತ್ತು ಪ್ರೀತಿಯಿಂದ ಬದುಕುವ ಮನೋಭಾವ ಬೆಳೆಸಿಕೊಳ್ಳಬೇಕು. ಯಾವುದೇ ಅಪಪ್ರಚಾರಗಳಿಗೆ ಕಿವಿಗೊಡದೆ ಪರಸ್ಪರ ವಿಶ್ವಾಸದಿಂದ ಮುನ್ನಡೆಯಬೇಕು ಎಂದು ಕರೆ ನೀಡಿದರು.

ಅಂಬೇಡ್ಕರ್ ಭವನದಿಂದ ಆರಂಭಗೊಂಡ ಶಾಂತಿ ನಡಿಗೆ ನೆಹರು ರಸ್ತೆ, ಗಾಂಧಿ ಬಜಾರ್ ಮೂಲಕ ಸಾಗಿತು. ರೈತರು, ವಿದ್ಯಾರ್ಥಿಗಳು, ವಿವಿಧ ಧರ್ಮಗಳ ಧರ್ಮಗುರುಗಳು, ವಿವಿಧ ಸಂಘ-ಸಂಸ್ಥೆಗಳ ಪ್ರತಿನಿಧಿಗಳು ಹಾಗೂ ಸಾವಿರಾರು ನಾಗರಿಕರು ನಡಿಗೆಯಲ್ಲಿ ಪಾಲ್ಗೊಂಡು ರಾಮಣ್ಣ ಶೆಟ್ಟಿ ಪಾರ್ಕ್‌ವರೆಗೆ ಹೆಜ್ಜೆ ಹಾಕಿದರು.

ರಾಮಣ್ಣ ಶೆಟ್ಟಿ ಪಾರ್ಕ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ಗಣ್ಯರು, ಸಮಾಜದಲ್ಲಿ ಶಾಂತಿ ಸ್ಥಾಪನೆ ಇಂದಿನ ಅತ್ಯಂತ ತುರ್ತು ಅಗತ್ಯವಾಗಿದೆ. ಕಲುಷಿತಗೊಳ್ಳುತ್ತಿರುವ ಸಾಮಾಜಿಕ ಪರಿಸರದಲ್ಲಿ ಶಾಂತಿ ಮತ್ತು ಸಹಬಾಳ್ವೆಯ ಜೀವನ ಕ್ರಮ ಮರೆಯಾಗುತ್ತಿರುವುದು ಆತಂಕಕಾರಿ ಬೆಳವಣಿಗೆ. ಸ್ವಾರ್ಥಪರತೆಯಿಂದ ಕೂಡಿದ ಜಗತ್ತಿನಲ್ಲಿ ದ್ವೇಷ ಹೆಚ್ಚುತ್ತಿರುವ ಸಂದರ್ಭದಲ್ಲಿ ಇಂದಿನ ತಲೆಮಾರಿಗೆ ಶಾಂತಿ, ಸಹಬಾಳ್ವೆ ಮತ್ತು ಮಾನವೀಯತೆಯ ಸಂದೇಶ ಸಾರುವ ಅಗತ್ಯವಿದೆ ಎಂದು ಅಭಿಪ್ರಾಯಪಟ್ಟರು.

ಶಾಂತಿ ನಡಿಗೆಯುದ್ದಕ್ಕೂ ವಿವಿಧ ಜನಪದ ಕಲಾ ತಂಡಗಳು ನೀಡಿದ ಪ್ರದರ್ಶನಗಳು ಗಮನ ಸೆಳೆದವು. ಮುಂಭಾಗದಲ್ಲಿ ಡೊಳ್ಳು ಕುಣಿತದ ಕಲಾವಿದರು ಹೆಜ್ಜೆ ಹಾಕಿದರೆ, ಅವರ ಹಿಂದೆ ತ್ರಿವರ್ಣ ಧ್ವಜ ಹಿಡಿದ ಸಾವಿರಾರು ವಿದ್ಯಾರ್ಥಿಗಳು ಹಾಗೂ ವಿವಿಧ ಸಂಘ-ಸಂಸ್ಥೆಗಳ ಪ್ರತಿನಿಧಿಗಳು ಸಾಗಿದರು. ಶಾಂತಿ ಮತ್ತು ಸಹಬಾಳ್ವೆ ಸಮಾನತೆಯ ಮೂಲಮಂತ್ರ ಸೇರಿದಂತೆ ವಿವಿಧ ಸಂದೇಶ ಸಾರುವ ಫಲಕಗಳನ್ನು ಹಿಡಿದು ಭಾಗವಹಿಸಿದವರು ಸೌಹಾರ್ದದ ಘೋಷಣೆಗಳನ್ನು ಮೊಳಗಿಸಿದರು. ಯುವಕರು ಹಳದಿ ಪೇಟ ಹಾಗೂ ಸಾಂಪ್ರದಾಯಿಕ ಉಡುಪು ಧರಿಸಿ ನಡಿಗೆಗೆ ಮತ್ತಷ್ಟು ಮೆರುಗು ತಂದರು.

ಕುವೆಂಪು ಶತಮಾನೋತ್ಸವ ಬಿ.ಎಡ್. ಕಾಲೇಜು ಹಾಗೂ ಸಹ್ಯಾದ್ರಿ ವಾಣಿಜ್ಯ ಕಾಲೇಜಿನ ವಿದ್ಯಾರ್ಥಿಗಳು ಪ್ರದರ್ಶಿಸಿದ ಬೀದಿನಾಟಕಗಳು ವಿಶೇಷ ಗಮನ ಸೆಳೆದವು. ಡಿವಿಎಸ್, ಸಹ್ಯಾದ್ರಿ ವಾಣಿಜ್ಯ ಕಾಲೇಜು(2ನೇ ಪುಟಕ್ಕೆ)

## ನೂತನ ಎಚ್‌ಎಲ್‌ಎ ಪ್ರಯೋಗಾಲಯ ಉದ್ಘಾಟನೆ

(ಮೊದಲ ಪುಟದಿಂದ)

ಟ್ರಾನ್ಸ್‌ಪ್ಲಾಂಟ್ ಇಮ್ಯುನಾಲಜಿ ಸಲಹೆಗಾರ ಡಾ. ವಿಜಯಾನಂದ, ಕಚೇರಿ ಅಧೀಕ್ಷಕ ರಿಯಾಜ್ ಅಹ್ಮದ್ ಖಾಜಿ, ನರ್ಸಿಂಗ್ ಅಧೀಕ್ಷಕಿ ಶೇಷಮ್ಮ ಸೇರಿದಂತೆ ವಿವಿಧ ವಿಭಾಗಗಳ ಮುಖ್ಯಸ್ಥರು, ವೈದ್ಯರು ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು.

ಪ್ರಯೋಗಾಲಯದಲ್ಲಿ ಲ್ಯಾಬ್ ಟೆಕ್ನಿಷಿಯನ್ ಅರ್ಪಿತಾ ಹಾಗೂ ಆಪ್ತಸಮಾಲೋಚಕ ಅಭಿಷೇಕ್ ಡಿ.ಸಿ. ಸೇವೆ ಸಲ್ಲಿಸಲಿದ್ದಾರೆ. ಅಂಗಾಂಗ ದಾನ ಮತ್ತು ಕಸಿ ಕುರಿತು ಕುಟುಂಬಸ್ಥರಿಗೆ ಮಾಹಿತಿ, ಮಾರ್ಗದರ್ಶನ ಹಾಗೂ ಆಪ್ತಸಮಾಲೋಚನೆ ನೀಡುವಲ್ಲಿ ಅವರು ಪ್ರಮುಖ ಪಾತ್ರ ವಹಿಸಲಿದ್ದಾರೆ.

## ಭದ್ರಾವತಿ: ಸಿ.ಎಸ್. ಷಡಾಕ್ಷರಿಗೆ ಸನ್ಮಾನ, ಕೃತಜ್ಞತೆ ಸಲ್ಲಿಕೆ



(ಹೊಸನಾವಿಕ)

ಶಿವಮೊಗ್ಗ, ಸೆ.11: ಭದ್ರಾವತಿ ತಾಲೂಕಿನ ಗುರುಭವನ ಕಟ್ಟಡದ ಮೊದಲ ಹಂತದ ಕಾಮಗಾರಿಗೆ ಸರ್ಕಾರದಿಂದ ಸುಮಾರು 2 ಕೋಟಿ ಅನುದಾನ ಮಂಜೂರು ಮಾಡಿಸುವಲ್ಲಿ ವಿಶೇಷ ಮುತುವರ್ಜಿ ವಹಿಸಿ ಸಹಕಾರ ನೀಡಿದ ರಾಜ್ಯ ಸರ್ಕಾರಿ ನೌಕರರ ಸಂಘದ ರಾಜ್ಯಾಧ್ಯಕ್ಷ ಸಿ. ಎಸ್. ಷಡಾಕ್ಷರಿಯವರನ್ನು ತಾಲೂಕಿನ ಸರ್ಕಾರಿ ನೌಕರರ ಸಂಘ ಹಾಗೂ ವಿವಿಧ ಶಿಕ್ಷಕರ ಸಂಘಟನೆಗಳ ವತಿಯಿಂದ ಆತ್ಮೀಯವಾಗಿ ಸನ್ಮಾನಿಸಿ ಕೃತಜ್ಞತೆ ಸಲ್ಲಿಸಲಾಯಿತು.

ಕಾರ್ಯಕ್ರಮದಲ್ಲಿ ಶಾಸಕ ಬಿ. ಕೆ. ಸಂಗಮೇಶ್ವರ ಅವರು ಗುರುಭವನದ ಮೊದಲ ಹಂತದ ಕಟ್ಟಡ ಕಾಮಗಾರಿಯ ಮಳಿಗೆಗಳನ್ನು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ, ಪ್ರೌಢಶಾಲಾ ಸಹ ಶಿಕ್ಷಕರ ಸಂಘ, ಪದವಿ ಪೂರ್ವ, ಕಾಲೇಜು ಶಿಕ್ಷಣ ಇಲಾಖೆಯ ವಿವಿಧ ಶಿಕ್ಷಕರ ಸಂಘಟನೆಗಳ ಪದಾಧಿಕಾರಿಗಳು ಉಪಸ್ಥಿತರಿದ್ದರು.

## ಶಿವಮೊಗ್ಗದಲ್ಲಿ ಇಂದಿನಿಂದ ಮೈಸೂರು ಸ್ಯಾಂಡಲ್ ಸಾಬೂನು ಮೇಳ: ವ್ಯವಸ್ಥಾಪಕ ನಿರ್ದೇಶಕ ಗಂಗಪ್ಪ



(ಹೊಸನಾವಿಕ)

ಶಿವಮೊಗ್ಗ, ಸೆ. 11: ಕರ್ನಾಟಕ ಸರ್ಕಾರದ ಅಧೀನದ ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತ (ಕೆಎಸ್‌ಡಿಎಲ್) ವತಿಯಿಂದ ನಗರದ ಸಾಗರ ರಸ್ತೆಯ ಮೆಗ್ಗಾನ್ ಆಸ್ಪತ್ರೆ ಎದುರಿನ ಪೊಲೀಸ್ ಭವನದಲ್ಲಿ ಸೆ. 11ರಿಂದ 18ರವರೆಗೆ ಮೈಸೂರು ಸ್ಯಾಂಡಲ್ ಸಾಬೂನು ಮೇಳ ಆಯೋಜಿಸಲಾಗಿದೆ ಎಂದು ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಗಂಗಪ್ಪ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೆಎಸ್‌ಡಿಎಲ್‌ನ ಮೈಸೂರು ಸ್ಯಾಂಡಲ್ ಉತ್ಪನ್ನಗಳು ವಿಶ್ವ ವಿಖ್ಯಾತವಾಗಿದ್ದು, ಸಾಬೂನು, ಅಗರಬತ್ತಿ, ಸೌಂದರ್ಯ ವರ್ಧಕಗಳು, ಶ್ರೀಗಂಧದ ಎಣ್ಣೆ, ಮಾರ್ಜಕ ಸೇರಿದಂತೆ 80ಕ್ಕೂ ಹೆಚ್ಚು ಉತ್ಪನ್ನಗಳನ್ನು ಸಂಸ್ಥೆ ತಯಾರಿಸುತ್ತಿದೆ. ಮೇಳದಲ್ಲಿ ಉತ್ಪನ್ನಗಳ ಪ್ರದರ್ಶನ ಹಾಗೂ ಮಾರಾಟ ನಡೆಯಲಿದ್ದು, ವಿವಿಧ ಸಾಬೂನು, ಸೌಂದರ್ಯವರ್ಧಕ ಮತ್ತು ಅಗರಬತ್ತಿಗಳ ಮೇಲೆ ವಿಶೇಷ ರಿಯಾಯಿತಿ ನೀಡಲಾಗುವುದು. ಮೇಳ ಪ್ರತಿದಿನ ಬೆಳಗ್ಗೆ 9.30ರಿಂದ ರಾತ್ರಿ 9ರವರೆಗೆ ನಡೆಯಲಿದೆ ಎಂದರು.

ಮೈಸೂರು ಮಹಾರಾಜರ ಆಶಯದಂತೆ ಸರ್ ಎಂ. ವಿಶ್ವೇಶ್ವರಯ್ಯ ಹಾಗೂ ರಸಾಯನ ಶಾಸ್ತ್ರಜ್ಞ ಎಸ್.ಜಿ. ಶಾಸ್ತ್ರಿ ಅವರ ಮಾರ್ಗದರ್ಶನದಲ್ಲಿ ಆರಂಭವಾದ ಸಂಸ್ಥೆ 110 ವರ್ಷಗಳ ಭವ್ಯ ಪರಂಪರೆ ಹೊಂದಿದೆ. ಮೈಸೂರು ಸ್ಯಾಂಡಲ್ ಸಾಬೂನು ಐಎಸ್‌ಒ ಸೇರಿದಂತೆ ಹಲವು ಗುಣಮಟ್ಟದ ಪ್ರಮಾಣಪತ್ರಗಳನ್ನು ಪಡೆದಿದೆ ಎಂದು ಹೇಳಿದರು.

2025-26ನೇ ಸಾಲಿನಲ್ಲಿ ಸಂಸ್ಥೆ ರೂ.2,016 ಕೋಟಿ ವಹಿವಾಟು ನಡೆಸಿ ರೂ.522 ಕೋಟಿ ನಿವ್ವಳ ಲಾಭ ಗಳಿಸಿದೆ. 2026ರ ಆಗಸ್ಟ್‌ವರೆಗೆ ರೂ.780 ಕೋಟಿ ವಹಿವಾಟು ನಡೆದಿದೆ. ಸುಮಾರು 25 ದೇಶಗಳಿಗೆ ಉತ್ಪನ್ನಗಳನ್ನು ರಫ್ತು ಮಾಡಲಾಗುತ್ತಿದ್ದು, ವಾರ್ಷಿಕ ರೂ.25 ಕೋಟಿ ವಹಿವಾಟು ನಡೆಯುತ್ತಿದೆ ಎಂದರು.

ಕೆಎಸ್‌ಡಿಎಲ್ ಬ್ರಾಂಚ್ ಮ್ಯಾನೇಜರ್ ಸುಷ್ಮಾ ಮಾತನಾಡಿ, ಶ್ರೀಗಂಧದ ನಿರಂತರ ಪೂರೈಕೆಗಾಗಿ ರಾಜ್ಯದ ವಿವಿಧೆಡೆ 750ಕ್ಕೂ ಹೆಚ್ಚು ರೈತರನ್ನು ಭೇಟಿ ಮಾಡಿ ಒಪ್ಪಂದ ಮಾಡಿಕೊಳ್ಳಲಾಗಿದೆ. ಶ್ರೀಗಂಧ ಬೆಳೆಯಲು ಆಸಕ್ತಿ ಹೊಂದಿರುವ ರೈತರಿಗೆ ಸಂಸ್ಥೆಯಿಂದ ಅಗತ್ಯ ನೆರವು ನೀಡಲಾಗುವುದು ಎಂದರು.

ಪತ್ರಿಕಾಗೋಷ್ಠಿಯಲ್ಲಿ ಸಂಸ್ಥೆಯ ಹಿರಿಯ ಅಧಿಕಾರಿಗಳಾದ ಸುರೇಶ್ ಹಾಗೂ ಅಶೋಕ್ ಕುಮಾರ್ ಉಪಸ್ಥಿತರಿದ್ದರು.

## ಸೆ.13: ಭೋವಿ ಸಮಾಜದಿಂದ ಪ್ರತಿಭಾ ಪುರಸ್ಕಾರ



(ಹೊಸನಾವಿಕ)

ಶಿವಮೊಗ್ಗ, ಸೆ.11: ಜಿಲ್ಲಾ ಭೋವಿ (ವಡ್ಡರ) ವಿದ್ಯಾವರ್ಧಕ ಸಂಘದ ವತಿಯಿಂದ 2025-26ನೇ ಸಾಲಿನ ಎಸ್‌ಎಸ್‌ಎಲ್‌ಸಿ ಹಾಗೂ ದ್ವಿತೀಯ ಪಿಯುಸಿಯಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ಸಮಾಜದ 100ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಸೆ.13ರಂದು ಜಿಲ್ಲಾ ಭೋವಿ ಭವನದಲ್ಲಿ ಪ್ರತಿಭಾ ಪುರಸ್ಕಾರ ನೀಡಲಾಗುವುದು ಎಂದು ಸಂಘದ ಅಧ್ಯಕ್ಷ ಎಸ್. ರವಿಕುಮಾರ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಚಿತ್ರದುರ್ಗ, ಬಾಗಲಕೋಟೆ ಭೋವಿ ಮಹಾಸಂಸ್ಥಾನದ ಪೀಠಾಧ್ಯಕ್ಷ ಜಗದ್ಗುರು ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ ಅವರ ದಿವ್ಯ ಸಾನ್ನಿಧ್ಯದಲ್ಲಿ ಕಾರ್ಯಕ್ರಮ ನಡೆಯಲಿದೆ. ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಎಸ್. ಬಂಗಾರಪ್ಪ ಕಾರ್ಯಕ್ರಮ ಉದ್ಘಾಟಿಸುವರು. ಸಂಸದ ಬಿ.ವೈ. ರಾಘವೇಂದ್ರ, ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪುರಸ್ಕಾರ ವಿತರಿಸುವರು ಎಂದರು.

ಶಾಸಕರಾದ ಬಿ.ಕೆ. ಸಂಗಮೇಶ್ವರ, ಗೋಪಾಲಕೃಷ್ಣ ಬೇಳೂರು, ಆರಗ ಜ್ಞಾನೇಂದ್ರ, ಎಸ್.ಎನ್. ಚನ್ನಬಸಪ್ಪ, ಶಾರದಾ ಪೂರ್ಯನಾಯ್ಕ್, ಬಿ.ವೈ. ವಿಜಯೇಂದ್ರ, ಹಾಗೂ ವಿಧಾನ ಪರಿಷತ್ ಸದಸ್ಯರಾದ ಡಿ.ಎಸ್. ಅರುಣ್, ಡಾ. ಧನಂಜಯ ಸರ್ಜಿ ಮತ್ತು ಬಲ್ಕೀಶ್ ಬಾನು ಮುಖ್ಯ ಅತಿಥಿಗಳಾಗಿ ಭಾಗವಹಿಸುವರು ಎಂದು ತಿಳಿಸಿದರು.

ಸಮಾಜವು ಆರ್ಥಿಕವಾಗಿ ಹಿಂದುಳಿದಿದ್ದರೂ ಶೈಕ್ಷಣಿಕವಾಗಿ ಪ್ರಗತಿ ಸಾಧಿಸುತ್ತಿದೆ. ಈ ಬಾರಿ 100ಕ್ಕೂ ಹೆಚ್ಚು ವಿದ್ಯಾರ್ಥಿಗಳು ಪುರಸ್ಕಾರಕ್ಕೆ ಆಯ್ಕೆಯಾಗಿದ್ದು, ಪ್ರತಿಯೊಬ್ಬರಿಗೂ ತಲಾ ರೂ.5 ಸಾವಿರ ನಗದು ಹಾಗೂ ನೆನಪಿನ ಕಾಣಿಕೆ ನೀಡಲಾಗುವುದು. ಸಂಘಕ್ಕೆ ನೂತನವಾಗಿ ಸದಸ್ಯತ್ವ ಪಡೆದ 40 ಮಂದಿಗೆ ಗುರುತಿನ ಚೀಟಿ ವಿತರಿಸಲಾಗುವುದು ಎಂದರು.

ಸಂಘದ ನಿರ್ದೇಶಕ ಧೀರರಾಜ್ ಹೊನ್ನವಿಲೆ ಮಾತನಾಡಿ, ಮುಂದಿನ ದಿನಗಳಲ್ಲಿ ತಾಂತ್ರಿಕ ಶಿಕ್ಷಣದಲ್ಲೂ ಪ್ರತಿಭಾ ಪುರಸ್ಕಾರ ನೀಡಲು ಉದ್ದೇಶಿಸಲಾಗಿದೆ. ಸಮಾಜದ ವಿದ್ಯಾರ್ಥಿಗಳಿಗಾಗಿ ವಿದ್ಯಾರ್ಥಿನಿಲಯ ಸ್ಥಾಪಿಸುವ ಗುರಿಯೂ ಇದೆ ಎಂದರು.

ಕೃಷಿ ವಿವಿ ಆಡಳಿತ ಮಂಡಳಿ ಸದಸ್ಯ ಹೆಚ್.ಡಿ. ದೇವಿಕುಮಾರ್, ಉಪಾಧ್ಯಕ್ಷ ಬಸವರಾಜಪ್ಪ ಹೆಚ್.ಹೆಚ್., ಕಾರ್ಯದರ್ಶಿ ವೀರೇಶಪ್ಪ ಕೆ.ಎನ್., ಖಜಾಂಚಿ ಪಿ. ಲೋಕೇಶ್ ಹಾಗೂ ನಿರ್ದೇಶಕರಾದ ಬಿ.ಟಿ. ನಾಗರಾಜ್, ವೀರಭದ್ರಪ್ಪ ಪೂಜಾರಿ, ಡಿ. ಬಸವರಾಜ್, ಕೌಶಿಕ್ ಚಂದನ್ ಪಿ., ತಿಮ್ಮರಾಜು ವೈ., ಕೆ. ರಮೇಶ್ ನವುಲೆ ಮತ್ತು ಎಂ. ಕೃಷ್ಣಮೂರ್ತಿ ಉಪಸ್ಥಿತರಿದ್ದರು.


**ಪುರಸಭೆ ಕಾರ್ಯಾಲಯ, ಶಿಕಾರಿಪುರ –577427**
ಶಿವಮೊಗ್ಗ ಜಿಲ್ಲೆ, ಕರ್ನಾಟಕ ರಾಜ್ಯ
web:www.shikaripuratown.mrc.gov.in
Phone: 08187-222771
Email-id: ka.shikaripura.tmc@gmail.com
ಸಂಖ್ಯೆ: ಪುಶಿ/ಜೆಇ/ಸಿಆರ್/09/2026–27 ದಿನಾಂಕ : 09–09–2026

**ದರಪಟ್ಟಿ ಆಹ್ವಾನ**

ಈ ಮೂಲಕ ಅಧಿಕೃತ ಸರಬರಾಜುದಾರರು / ಮಾರಾಟಗಾರರಿಗೆ ತಿಳಿಯಪಡಿಸುವುದೇನೆಂದರೆ, ಶಿಕಾರಿಪುರ ಪುರಸಭೆಯ ಸಾಮಾನ್ಯ ನಿಧಿ / ಕಲ್ಯಾಣ ನಿಧಿ / ಉದ್ದಿಮೆ ನಿಧಿಯಡಿಯಲ್ಲಿ ಸರ್ಕಾರದಿಂದ ಅನುಮೋದಿತ ದರ ನಮೂದಾಗದೇ ಇರುವ ಈ ಕೆಳಕಂಡ ಸಾಮಾಗ್ರಿಗಳ ಖರೀದಿಗೆ ದರಪಟ್ಟಿ ಆಹ್ವಾನಿಸುತ್ತಿದ್ದು, ಸಲ್ಲಿಕೆಯಾಗುವ ದರಪಟ್ಟಿಗಳ ಆಧಾರದ ಮೇರೆಗೆ ಅತಿ ಕಡಿಮೆ ದರ ನಮೂದಿಸುವ ಸಂಸ್ಥೆಯ ದರವನ್ನು ಅನುಮೋದನೆ ಪಡೆದು ಟೆಂಡರ್ ಮೂಲಕ ಸಾಮಾಗ್ರಿ ಸರಬರಾಜುವಿಗೆ ಕ್ರಮ ವಹಿಸಲಾಗುವುದು. ದರಪಟ್ಟಿ ಸಲ್ಲಿಸಲು ಕೊನೆಯ ದಿನಾಂಕ : 24–09–2026 ಈ ಕೆಳಕಂಡ ಸಾಮಗ್ರಿಗಳ ತಾಂತ್ರಿಕ ವಿಶ್ಲೇಷಣೆಯನ್ನು ಪುರಸಭೆ ಕಛೇರಿಯ ತಾಂತ್ರಿಕ ವಿಭಾಗ ಸಂಪರ್ಕಿಸಿ ಪಡೆಯಬಹುದಾಗಿದೆ.

ಸಾಮಾಗ್ರಿಗಳ ವಿವರ: Plastic Chair without Handle, Plastic Stool, Dining Desk/Table, Head Rest Officer Chair, L Shape Officer Table, L Shape Staff Table, Officer Chair, Office Staff Chair, LED TV, Electrical Wheel Chair, Elbow Crutches, Wheel Chair, Wheel Chair with Commode, Air Bed, Wheel Chair with Safety Belt, Rollator Walker, Walker, Arm Crutches, Printer with Scanner, Printer without Scanner, Colour Printer, Scanner, All in One Computer, Monitor, Hard Disk, Pen Drive, Tablet, Projector, Interactive Screen, CPU/Desktop, Wireless Keyboard & Mouse, Projecting screen,Projector installation,Speakers,granite Bench,3 Seater for out door, solar street light , Shrimp slide-3ft, straight open slide-3 ft, Curve Slide -5 ft, Spriral Tunnel Slide-5ft, Spiral slide-7ft, Roto Seating MGR, Roto Wheel Go Round, Horse MGR, Animal MGR, Double Arc Swing, Curve Post Swing, Toddler Swing, Mother Child Swing, Dumbo Rider, Duck Rider, Horse Rider, Aeroplane Rider, Double See Saw, Deluxe junior See Saw, Horse See Saw, Igloo Climber, Net Rock Climber-5ft, Net Rock Climber-7ft, Crest Loop Climber, Mushroom Climber, S Bridge Climber, Atom Swing, MPFS Product Specification, ಪಾರ್ಕಿಗೆ ಸಂಬಂಧಪಟ್ಟ ಬೆಂಚ್ ಮತ್ತು ಆಟಿಕೆ ಸಾಮಗ್ರಿಗಳು, ಎಲೆಕ್ಟ್ರಾನಿಕ್ ಉಪಕರಣಗಳು ಮತ್ತು ಆಸನಗಳು, ಭೋಜನಾಲಯಕ್ಕೆ ಅಗತ್ಯವಿರುವ ಅಡುಗೆ ಪಾತ್ರೆ ಸಾಮಗ್ರಿಗಳ ವಿವರಗಳು ಮತ್ತು ವಿಶ್ಲೇಷಣೆಗಳನ್ನು ಈ ಕಛೇರಿ ವೇಳೆಯಲ್ಲಿ ಪಡೆದು ದರ ನಮೂದಿಸಿ ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸುವುದು.

ಸಹಿ/– ಮುಖ್ಯಾಧಿಕಾರಿ ಪುರಸಭೆ ಶಿಕಾರಿಪುರ.

ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಶಿ/26–27/57/09/788



**ಸಸ್ಯಹಾರಿ ಹೊಟೇಲ್‌ನಲ್ಲಿ ಕೆಲಸಕ್ಕೆ ಬೇಕಾಗಿದ್ದಾರೆ**

ಶಿವಮೊಗ್ಗ ನಗರದಲ್ಲಿ ಶೀಘ್ರದಲ್ಲೇ ನೂತನವಾಗಿ ಶುಭಾರಂಭಗೊಳ್ಳಲಿರುವ ಸಸ್ಯಹಾರಿ ಹೊಟೇಲ್ ಮತ್ತು ಕಾಂಡಿಮೆಟ್ಸ್‌ನಲ್ಲಿ ಕೆಲಸ ಮಾಡಲು ವಿವಿಧ ಹುದ್ದೆಗಳಿಗೆ ಅನುಭವವಿ ಕೆಲಸಗಾರರು ಬೇಕಾಗಿದ್ದಾರೆ.

| | | |
|---|---|---|
| ಅಡುಗೆ ಭಟ್ಟರು | - | 03 |
| ಸಹಾಯಕರು | - | 03 |
| ಕ್ಲೀನರ್ಸ್ | - | 02 |
| ವೇಯ್ಟರ್ಸ್ | - | 02 |
| ಕಾಫಿ ಮೇಕರ್ಸ್ | - | 01 |

ಕಾಂಡಿಮೆಟ್ಸ್‌ನಲ್ಲಿ ಕೆಲಸ ಮಾಡಲು ಅನುಭವವುಳ್ಳ ಇಬ್ಬರು (02) ನೌಕರರು ಬೇಕಾಗಿದ್ದಾರೆ.

ಆಸಕ್ತ ಅನುಭವವುಳ್ಳ ಅಭ್ಯರ್ಥಿಗಳು ಖುದ್ದಾಗಿ ಈ ಕೆಳಗಿನ ಮೊಬೈಲ್ ನಂಬರ್‌ಗೆ ಸಂಪರ್ಕಿಸಿ:

ಮೊಬೈಲ್ ನಂ. : 997 286 8347



**ವಿಶಾಲವಾದ ನಿವೇಶನ ಮಾರಾಟಕ್ಕಿದೆ**

ಶಾರದಾ ಅಂಧರ ವಿಕಾಸ ರಸ್ತೆ, ಪೋದಾರ್ ಶಾಲೆ ಎದುರು ತುಳಸಿ ಲೇಔಟ್ ಹಿಂಭಾಗದಲ್ಲಿ ಡಿಸಿ ಕನ್ವರ್ಷನ್ ಆಗಿರುವ ವಿಶಾಲವಾದ 10 ಗುಂಟೆ ಜಾಗ ತಕ್ಷಣ ಮಾರಾಟಕ್ಕಿದೆ. ಆಸಕ್ತರು ಸಂಪರ್ಕಿಸಿ.

ಮೊಬೈಲ್: 94801 49944, 90191 16780



**ಜಮೀನು ಬೇಕಾಗಿದೆ**

ಶಿವಮೊಗ್ಗ ನಗರಕ್ಕೆ ಸಮೀಪದಲ್ಲಿ 2 ಅಥವಾ 3 ಎಕರೆ ಜಮೀನು ಬೇಕಾಗಿದೆ. ಮಾರಾಟ ಮಾಡುವವರು ನೇರವಾಗಿ ಸಂಪರ್ಕಿಸಿ.
ಮಧ್ಯವರ್ತಿಗಳಿಗೆ ಅವಕಾಶವಿಲ್ಲ

ಮೊಬೈಲ್ : 9448343211



ಕ್ಷಣ ಕ್ಷಣದ ತಾಜಾ ಸುದ್ದಿಗಾಗಿ ವೀಕ್ಷಿಸಿ:

ಹೊಸನಾವಿಕ ಕನ್ನಡ ದಿನಪತ್ರಿಕೆ ಮತ್ತು ಹೊಸನಾವಿಕ ವೆಬ್‌ಪೋರ್ಟಲ್‌ನಲ್ಲಿ ಸುದ್ದಿ ಮತ್ತು ಜಾಹೀರಾತು ನೀಡಲು ಈ ಕೆಳಕಂಡ ಮೊಬೈಲ್‌ಗೆ ಸಂಪರ್ಕಿಸಿ:

9482482182

www.hosanavika.com



Office @ :Behind KSRTC Bus stand, Vijaya Rice Mill Building, Budha Nagar, Shimoga 577201. Karnataka State. Phone: 948 248 2182
Edited, Published, Printed & Owned by ALPHONSE RAKESH D'SOUZA. "Rekha", Old barline Road, Opposite Kalappa compound, Shimoga 577201.
Printed by him at Yogitha Printers, Behind KSRTC Bus stand, Vijaya Rice Mill Building, Budha Nagar, Shimoga 577201.